# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 185 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 24.01.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 185 • PRGI No:KARKAN/2023/88055 • VIJAYANAGARA • 24.01.2025 • Friday • Page:04 • Rs:2







ಮೈಕ್ರೋ ನ್ಯೂಸ್

## ಜ.30 ರಂದು ಅಂಚೆ ಕಚೇರಿ ದೂರುಗಳ ಡಾಕ್ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**

ಉತ್ತರ ಕರ್ನಾಟಕ ಕ್ಷೇತ್ರದ ವ್ಯಾಪ್ತಿಯಲ್ಲಿ ಅಂಚೆ ಕಚೇರಿಗಳಿಗೆ ಸಂಬಂಧಿಸಿದಂತೆ ಅಂಚೆ ವಿಷಯಗಳ ಬಗ್ಗೆ ಚರ್ಚಿಸಲು ಜ.30 ರಂದು ಬೆಳಿಗ್ಗೆ 11 ಗಂಟೆಗೆ ಧಾರವಾಡದ ಡಿಸಿ ಕಾಂಪೌಂಡ್‌ನ ಅಕ್ಕನ ಬಳಗ ಎದುರಿನ ಉತ್ತರ ಕರ್ನಾಟಕ ಕ್ಷೇತ್ರದ ಪೋಸ್ಟ್ ಮಾಸ್ಟರ್ ಜನರಲ್ ಕಚೇರಿಯಲ್ಲಿ 'ಡಾಕ್ ಅದಾಲತ್' ಏರ್ಪಡಿಸಲಾಗಿದೆ.


ಉತ್ತರ ಕರ್ನಾಟಕ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಂದು ಕೊರತೆಗಳಿರುವ ಸಾರ್ವಜನಿಕರು ಜ.28 ಸಂಜೆ 5 ಗಂಟೆಯ ಒಳಗೆ "ಕಾರ್ಯದರ್ಶಿ. ಡಾಕ್ ಅದಾಲತ್, ಪೋಸ್ಟ್ ಮಾಸ್ಟರ್ ಜನರಲ್ ರವೆ ಕಚೇರಿ, ಉತ್ತರ ಕರ್ನಾಟಕ ಕ್ಷೇತ್ರ, ಧಾರವಾಡ–580001' ಇವರಿಗೆ ದೂರುಗಳನ್ನು ಸಲ್ಲಿಸಬಹುದು ಎಂದು ಪೋಸ್ಟ ಮಾಸ್ಟರ್ ಜನರಲ್ ಕಚೇರಿಯ ಸಹಾಯಕ ನಿರ್ದೇಶಕ ಸುಕುಮಾರ್ ನಾಯ್ಕ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.






# ಕೆರೆ ಒತ್ತುವರಿ ತೆರವು

## ಬೋಟಿಂಗ್– ರಸ್ತೆ, ಮಕ್ಕಳಾಟಕೆ ವ್ಯವಸ್ಥೆ | ವಾಯು ವಿಹಾರಕ್ಕೆ ಅವಕಾಶ
## ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿಕೆ | ಕೆರೆ ಅಭಿವೃದ್ಧಿಗೆ ಭೂಮಿಪೂಜೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ಸುಂದರೀಕರಣ, ಸ್ವಚ್ಛತೆ ಸೇರಿದಂತೆ ಮೂಲ ಸೌಕರ್ಯಗಳಿಗೆ ಮೊದಲ ಆದ್ಯತೆ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು.

ಪಟ್ಟಣದ ಉಡುಸಲಮ್ಮನ ಕೆರೆಯಲ್ಲಿ ಗುರುವಾರ ಸಂಸದರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಕೆರೆಯನ್ನು ಅಭಿವೃದ್ಧಿಗೊಳಿಸುವ ಯೋಜನೆಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಶತಮಾನಗಳಷ್ಟು ಹಳೆಯದಾದ ಉಡುಸಲಮ್ಮನ ಕೆರೆ ಪ್ರಸ್ತುತ ಪಟ್ಟಣ ಬೆಳೆದಂತೆ ಈಗ ಹೃದಯ ಭಾಗದಲ್ಲಿ ಇದೆ. ಕೆಲವರು ಕೆರೆಯ ಭೂ ಪ್ರದೇಶವನ್ನು ಅನಧಿಕೃತವಾಗಿ ಕಟ್ಟಡ ಕಟ್ಟಿದ್ದಾರೆ. ಇನ್ನೂ ಕೆಲ ನಿರಾಶ್ರಿತರು ಕೆರೆಯ ಏರಿ ಭಾಗದಲ್ಲಿ ಮನೆಗಳ ನಿರ್ಮಾಣ ಮಾಡಿ ಕೊಂಡಿದ್ದಾರೆ. ಇಲ್ಲಿನ ನಿವಾಸಿಗಳಿಗೆ ಬೇರೆ ಕಡೆ ನಿವೇಶನಗಳನ್ನು ನೀಡಿ ಸ್ಥಳಾಂತರ ಮಾಡಲಾಗುವುದು. ಅಕ್ರಮವಾಗಿ ಕೆರೆಯಲ್ಲಿ ಮನೆಗಳನ್ನು ನಿರ್ಮಿಸಿದ ಜಾಗವನ್ನು ವಶಪಡಿಸಿಕೊಂಡು, ಪಟ್ಟಣದ ವಯೋವೃದ್ಧರಿಗೆ, ವಾಯು ವಿಹಾರ ಮಾಡುವ ಸಾರ್ವಜನಿಕರಿಗೆ ಉತ್ತಮ ವಾತಾವರಣ ಕಲ್ಪಿಸುವ ಉದ್ದೇಶದಿಂದ ಕೆರೆಯನ್ನು ಸ್ವಚ್ಛಗೊಳಿಸಿ, ಮಕ್ಕಳಿಗೆ ಆಟವಾಡಲು ಆಟಿಕೆ ಹಾಗೂ ಕೆರೆಯ ಏರಿಯ ಮೇಲೆ ಉತ್ತಮ ರಸ್ತೆ ನಿರ್ಮಿಸಿ ವಾಯು ವಿಹಾರಿಗಳಿಗೆ ವಿಶ್ರಾಂತಿಗೆ ಆಸನಗಳು ಸೇರಿದಂತೆ, ಬೋಟಿಂಗ್ ವ್ಯವಸ್ಥೆ ಮಾಡಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಯೋಜನೆ ರೂಪಿಸಿರುವೆ. ಉಳಿದಂತೆ ಇನ್ನೂ ಹೆಚ್ಚಿನ ಸಲಹೆಗಳಿದ್ದರೆ ಅದನ್ನು ಸಹ ಆಲಿಸಿ ಸುಂದರ ಹಾಗೂ ಸ್ವಚ್ಛ ವಾತಾವರಣ ಕಲ್ಪಿಸಲು ಮುಂದಾಗುವೆ ಎಂದ ಅವರೂ, ಪಟ್ಟಣದ ಹೌಸಿಂಗ್ ಬೋರ್ಡ್ ಕಾಲನಿಯ ಉದ್ಯಾನವನ್ನು ಅಂದಾಜು 1 ಕೋಟಿ ಅನುದಾನ ನೀಡಿ ಅಲ್ಲಿಯೂ ಸಾರ್ವಜನಿಕರ ವಾಯು ವಿಹಾರಕ್ಕೆ ಹಾಗೂ ಮಕ್ಕಳಿಗೆ ಆಟದ ಪರಿಕರಗಳನ್ನು ಕಲ್ಪಿಸಲು ಶೀಘ್ರದಲ್ಲೇ ಕಾಮಗಾರಿ ಕೈಗೆತ್ತಿಗೊಳ್ಳಲು ಗುತ್ತಿಗೆ ದಾರರಿಗೆ ಸೂಚಿಸಿದ್ದು, ಈ ಎರಡು ಕಾಮಗಾರಿ ಗಳನ್ನು ಉತ್ತಮ ಹಾಗೂ ಗುಣಮಟ್ಟದ ಕಾಮ ಗಾರಿಗೆ ಆದ್ಯತೆ ನೀಡಲು ಸೂಚಿಸಿರುವೆ ಎಂದು ತಿಳಿಸಿದರು. ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಉಪಾಧ್ಯಕ್ಷೆ ಲೀಲಾವತಿ ಪ್ರಭಾಕರ, ಸ್ಥಾಯಿ ಸಮಿತಿ ಅಧ್ಯಕ್ಷ ಸಯ್ಯದ್ ಶುಕೂರ್, ಸದಸ್ಯರಾದ ತಳಾಸ್ ವೆಂಕಟೇಶ, ಮಂಜುನಾಥ, ಕೆ.ಈಶಪ್ಪ, ಪೂರ್ಯಾ ನಾಯ್ಕ, ಬಾಸೂ ನಾಯ್ಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಗುರುಸಿದ್ದನ ಗೌಡ, ನಾಗಮಣಿ ಜಿಂಕಾಲ್, ಹಿರೇಕುಂಬಳಗುಂಟೆ ಉಮೇಶ್, ಹಡಗಲಿ ವೀರಭದ್ರಪ್ಪ, ಮಾದಿಹಳ್ಳಿ ನಜೀರ್, ಢಾಣಿ ರಾಘವೇಂದ್ರ, ಬಿ.ಕೆ.ರಾಘವೇಂದ್ರ, ಜಿಲಾನ್ ಸೇರಿದಂತೆ ಅನೇಕರು ಇದ್ದರು.



## ಸೆಲ್ಫಿ ವಿತ್ ಬೇಬಿ
### ಹೆಣ್ಣು ಮಗುವನ್ನು ಉಳಿಸಿ ಬೆಳೆಸಿ

**ಇಂದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ, ನಿಮ್ಮ ಮಗಳೊಂದಿಗೆ ಸೆಲ್ಫಿ ಕಳಿಸಿ, ನಿಮ್ಮ ಮತ್ತು ಮಗುವಿನ ಹೆಸರು, ಊರು, ತಾಲೂಕಿನ ಹೆಸರು, ಸಂಕ್ಷಿಪ್ತ ಅಭಿಪ್ರಾಯವೂ ಇರಲಿ. ಜ.24 ರಂದು ಸಂಜೆ 4ರೊಳಗೆ ಹಂಪಿ ಟೈಮ್ಸ್ ವಾಟ್ಸಪ್ ಮೊ: 9448633038 ಗೆ ಕಳಿಸಿ.**

# ಹರಪನಹಳ್ಳಿಯಲ್ಲಿ ತೊಗರಿ ಖರೀದಿ ಕೇಂದ್ರ ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**



ಬೆಂಬಲ ಯೋಜನೆಯಡಿ 2024–25 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಜಯನಗರ ಜಿಲ್ಲೆಯಲ್ಲಿ ರೈತರಿಂದ ತೊಗರಿ ಉತ್ಪನ್ನವನ್ನು ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ.7550 ರಂತೆ ಖರೀದಿಗಾಗಿ ಖರೀದಿ ಕೇಂದ್ರ ಆರಂಭಿಸಲಾಗಿದೆ ಎಂದು ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ, ಬೆಂಗಳೂರು ಇವರಿಂದ ಜಿಲ್ಲೆಯ ಹರಪನಹಳ್ಳಿ ತಾಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ (ಟಿಎಪಿಸಿಎಂಎಸ್) ಕಚೇರಿಯಲ್ಲಿ ಖರೀದಿ ಕೇಂದ್ರವನ್ನು ತೆರೆಯಲಾಗಿದೆ. ಈಗಾಗಲೇ ರೈತರಿಂದ ಹೂವಿನಹಡಗಲಿಯಲ್ಲಿ ಖರೀದಿ ಕೇಂದ್ರ ಪ್ರಾರಂಭಿಸಲಾಗಿದೆ. ಹೆಚ್ಚುವರಿಯಾಗಿ ಹರಪನಹಳ್ಳಿಯಲ್ಲಿ ಖರೀದಿ ಕೇಂದ್ರ ಆರಂಭಿಸಲಾಗಿದೆ. ಈ ಭಾಗದ ರೈತರು ಸದುಪಯೋಗ ಮಾಡಿಕೊಳ್ಳುವಂತೆ ಹಾಗೂ ಯಾವುದೇ ಮಧ್ಯವರ್ತಿಗಳ ಮೊರೆ ಹೋಗದಂತೆ ನೇರವಾಗಿ ಕೇಂದ್ರಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯುವಂತೆ ತಿಳಿಸಿದ್ದಾರೆ.

# ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**



ಹೊಸಪೇಟೆಯ ನಗರದ 110/11 ಕೆವಿ ಉಪ ವಿಭಾಗ–2 ರ 11ಕೆವಿ ಸಂಕ್ಲಾಪುರ ವಿದ್ಯುತ್ ವಿತರಣಾ ತುರ್ತು ಕೆಲಸ ನಿರ್ಮಾಣ ಹಾಗೂ ದುರಸ್ತಿ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜ.24 ರಂದು ಹೊಸಪೇಟೆಯ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಜೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಜ.24 ರಂದು ಶುಕ್ರವಾರ, ಬೆ.11 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ 11 ಕೆವಿ ಫೀಡರ್ ಗಳಾದ ಹೊಸಪೇಟೆ ನಗರ ಉಪ ವಿಭಾಗ–2 ರ ವ್ಯಾಪ್ತಿಗೆ ಒಳಪಡುವ ಸುತ್ತಮುತ್ತಲಿನ ಪ್ರದೇಶಗಳಾದ ಬಳ್ಳಾರಿ ರಸ್ತೆ, ಮೇನ್ ಬಜಾರ್, ಜೆ.ಪಿ.ನಗರ, ಶಿರ್ಶಿನಕಲ್ಲು, ಅರವಿಂದ ನಗರ, ಉಕ್ಕಡಕೇರಿ, ಬಸ್ ಡಿಪೊ, ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಆಜಾದ್ ನಗರ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.




# ನೀರಾವರಿಗೆ 1274 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಸರ್ಕಾರ ಸಿದ್ಧಪಡಿಸಿದೆ: ಸಿ.ಎಂ



**ಹಂಪಿ ಟೈಮ್ಸ್ ಹಿರಿಯೂರು**

ನೀರಾವರಿಗೆ ನಮ್ಮ ಸರ್ಕಾರ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದು, 1274 ಕೋಟಿ ರೂಪಾಯಿ ವೆಚ್ಚದಲ್ಲಿ ಮತ್ತೊಂದು ಯೋಜನೆಯನ್ನು ಸರ್ಕಾರ ಸಿದ್ದಪಡಿಸಿದೆ. ಇದು ಜಾರಿ ಆದರೆ ಈ ಭಾಗದ ಕಟ್ಟ ಕಡೆಯ ಜಮೀನಿಗೂ ನೀರು ಒದಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ವಾಣಿವಿಲಾಸ ಜಲಾಶಯಕ್ಕೆ ಬಾಗಿನ ಅರ್ಪಿಸಿದ ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಮಾಡುವುದಾಗಿ ಕಾರಜೋಳ ಅವರು ಬರೀ ಬಾಯಿ ಮಾತಲ್ಲಿ ಹೇಳಿ ಬಳಿಕ ವಂಚಿಸಿದರು. ಈ ಯೋಜನೆಗೆ 5300 ಕೋಟಿ ರೂಪಾಯಿ ಕೊಡುವುದಾಗಿ ಕೇಂದ್ರ ಬಜೆಟ್ ನಲ್ಲಿ ನಿರ್ಮಲಾ ಸೀತಾರಾಮನ್ ಅವರು ಘೋಷಿಸಿದ್ದರು. ಆದರೆ ನಯಾಪೈಸೆ ಬಿಡುಗಡೆಗೊಳಿಸದೆ ಈ ಭಾಗದ ಜನ ಸಮುದಾಯಕ್ಕೆ ಗೋಂವಿಂದ ಕಾರಜೋಳ ಮತ್ತು ಕೇಂದ್ರ ಸರ್ಕಾರ ವಂಚಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಇನ್ನಾದರೂ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಜೊತೆ ಚರ್ಚಿಸಿ ಕೊಟ್ಟ ಮಾತಿನಂತೆ 5300 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿಸಿ ಎಂದು ಸವಾಲು ಹಾಕಿದರು. ಬಿಜೆಪಿ ಕೊಟ್ಟ ಮಾತಿಗೆ ವಂಚಿಸುತ್ತದೆ. ನಾವು ಕೊಟ್ಟ ಮಾತು ಈಡೇರಿಸಿ ನುಡಿದಂತೆ ನಡೆಯುತ್ತಿದ್ದೇವೆ. ಚುನಾವಣೆ ವೇಳೆ ಕೊಟ್ಟ ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿ ಮಾಡಿ ರಾಜ್ಯದ ಬಡವರು, ಮಧ್ಯಮ ವರ್ಗದವರು ಸೇರಿ ಎಲ್ಲಾ ಜನ ಸಮುದಾಯಗಳ ನಂಬಿಕೆ ಉಳಿಸಿಕೊಂಡಿದ್ದೇವೆ. ಇದೇ ನಮಗೂ ಬಿಜೆಪಿಗೂ ಇರುವ ವ್ಯತ್ಯಾಸ ಎಂದರು.

ವಾಣಿ ವಿಲಾಸ ಜಲಾಶಯ ಕೋಡಿ ಬಿದ್ದಿದ್ದು ಸರ್ಕಾರದಿಂದ ಬಾಗಿನ ಅರ್ಪಿಸಿ, ಗಂಗಾಪೂಜೆ ನೆರವೇರಿಸಿದ್ದೇವೆ. 115 ವರ್ಷಗಳ ಇತಿಹಾಸ ಇರುವ, ರಾಜ್ಯದಲ್ಲಿ ನಿರ್ಮಾಣ ಆದ ಮೊದಲ ಜಲಾಶಯ ಇದಾಗಿದ್ದು ಮೂರನೇ ಬಾರಿ ಕೋಡಿ ಬಿದ್ದಿದೆ. ಅಂದಿನ ಮಹಾರಾಣಿ ಅಮ್ಮಣ್ಣಿ ತಾಯಿ ತಮ್ಮ ಒಡವೆಗಳನ್ನು ಮಾರಿ 45 ಲಕ್ಷ ರೂಪಾಯಿ ಖರ್ಚು ಮಾಡಿ ಈ ಜಲಾಶಯ ನಿರ್ಮಿಸಿದ್ದಾರೆ. ಇದು 30 ಸಾವಿರ ಎಕರೆ ಕೃಷಿ ಭೂಮಿಗೆ ನೀರು ಒದಗಿಸುತ್ತಿದೆ. ಹೀಗಾಗಿ ರಾಣಿ ಅಮ್ಮಣ್ಣಿಯವರನ್ನು ನಾವು ಸ್ಮರಿಸುತ್ತೇವೆ, ಧನ್ಯವಾದ ಅರ್ಪಿಸುತ್ತೇವೆ ಎಂದರು.

ಜಲ ಸಂಪನ್ಮೂಲ ಸಚಿವ ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಜಿಲ್ಲೆಯ ಶಾಸಕರುಗಳು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಸಮಾಧಾನ ಬದುಕಿಗೆ ಅನನ್ಯ ಚೈತನ್ಯ...

ಆಧುನಿಕ ವಚನಕಾರರಾದ ಸಿದ್ಧಯ್ಯ ಪುರಾಣಿಕರು ಹೇಳಿದಂತೆ: 'ಎಲ್ಲವೂ ಎನಗಾಗಿ ಎನ್ನುವುದೇ ಕೆಡಕು, ಇದ್ದುದೆಲ್ಲ ಎಲ್ಲರಿಗಾಗಿ ಎನ್ನುವುದೇ ಒಳಿತು. ತನ್ನಿಂದ ಅನ್ಯರಿಗೆ ಕೇಡಾಗದಂತೆ ಬದುಕುವುದೇ ಧರ್ಮ, ಅನ್ಯರ ಬಳಲಿಸಿ ತನ್ನ ಬೊಜ್ಜು ಬೆಳೆಸುವುದೇ ಅಧರ್ಮ'. ಜನಪದರು ಹೇಳಿದಂತೆ 'ಎಲ್ಲರ ಮನಸ್ಸನ್ನು ಪ್ರೀತಿಯಿಂದ ಗೆಲ್ಲಲ್ಲು ಸಾಧ್ಯವೇ ಹೊರತು ಕೋಪ–ತಾಪಗಳಿಂದಲ್ಲ'. ಜೀವನದಲ್ಲಿ ಎಲ್ಲರನ್ನೂ ನಗು ನಗುತಾ ಮಾತಾಡಿಸಿದರೆ ಭಗವಂತ ಕರುಣಿಸಿದ ಮಾನವ ಜನ್ಮದ ಸಾರ್ಥಕತೆ ನಿಜವಾಗಿ ಅನುಭವಿಸಿದಂತಾಗುತ್ತದೆ. ಇದಕ್ಕೆ ಮುಖ್ಯವಾಗಿ ತನುಮನ ದಲ್ಲಿ ಸಮಾಧಾನ ಇರಬೇಕು.

ಇತ್ತೀಚಿನ ದಿನಗಳಲ್ಲಿ ಯಾರಲ್ಲಿಯೂ ಸಮಾಧಾನವೆಂಬುದು ಇಲ್ಲವೇ ಇಲ್ಲ. ಇದನ್ನು ನಮ್ಮೊಳಗಿರುವ ಭಾವನಾತ್ಮಕವಾದ ಪ್ರತಿಭೆ ಎನ್ನಬಹುದು. ಇದನ್ನು ಜೀವನದಲ್ಲಿ ಸಾಧಿಸಿಕೊಂಡು ಯಶಸ್ವಿಯಾದವರ ಬಗೆಗೆ ಅವಲೋಕನ ಮಾಡಿದರೆ ಅಂತಹ ಭಾವನೆ ಮೊಳಕೆಯೊಡೆಯಲು ಸಾಧ್ಯ. ಆದರೂ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗದಿರುವ ಸಂದರ್ಭದಲ್ಲಿ ಕೇವಲ ಹಣ, ಅಧಿಕಾರ, ಅಂತಸ್ತುಗಳಿಂದ ಅಳೆಯುವ ನಮ್ಮ ನಮ್ಮ ಮನಸ್ಸನ್ನು ಒಂದು ಕ್ಷಣ ಪ್ರಶ್ನಿಸಿಕೊಳ್ಳಬೇಕಾಗಿದೆ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ನಾವುಗಳು ಭೂಮಿಗೆ ಬರುವಾಗ ಬರಿಗೈಲಿ ಬಂದಿದ್ದೇವೆ ಹೋಗುವಾಗಲೂ ಅಷ್ಟೆ. ಅಂದಮೇಲೆ ಒಬ್ಬರನ್ನೊಬ್ಬರು ಇರುವಷ್ಟು ದಿನಗಳ ಕಾಲ ಹೊಂದಾಣಿಕೆಯ ಪ್ರವೃತ್ತಿ ಯಿಂದ ಬಾಳಿದರೆ ಸಾಲದೆ? ಜೀವನದಲ್ಲಿ ಇತರರೊಂದಿಗೆ ಯಾವುದೇ ಸಂದರ್ಭದಲ್ಲಿ ಭಿನ್ನಾಭಿಪ್ರಾಯಗಳು ಬರ



ಬಹುದು, ಇದು ಸಹಜ. ನಮ್ಮಲ್ಲಿ ಹೊಂದಾಣಿಕೆ–ಪ್ರೀತಿ–ವಿಶ್ವಾಸಗಳಿದ್ದರೆ ಯಾವ ಬಿರುಕುಗಳಿರುವುದಿಲ್ಲ. ಆಗ ನಮ್ಮ ಬದುಕು ಸುಂದರವಾಗುತ್ತದೆ.

ಮೂರು ದಿನದ ಬದುಕಿನಲ್ಲಿ ಹೊಂದಾಣಿಕೆಯೆಂಬುದು ಎಷ್ಟೊಂದು ಕಷ್ಟ. ಆದರೂ ಅರ್ಥೈಸಿಕೊಂಡು ವರ್ತಿಸಿದರೆ, ನಾವಂದುಕೊಂಡ ಕನಿಷ್ಠ ಕೆಲಸ ಕಾರ್ಯಗಳೆಲ್ಲಾ ಸುಗಮವಾಗಿ ನಡೆಯುತ್ತವೆ. ತುಡಿತ–ಮಿಡಿತಗಳನ್ನು ಇತರರೊಂದಿಗೆ ಹಂಚಿಕೊಂಡಾಗಲೂ ಹೃದಯ ಹಗುರಾಗುತ್ತದೆ. ಒಮ್ಮೊಮ್ಮೆ ಕೆಲವು ಸಣ್ಣ ವಿಚಾರಗಳಿಗೆ ತಲೆಕೆಡಿಸಿಕೊಂಡು ವೃಥಾ ಸೊರಗುತ್ತೇವೆ. ಇದನ್ನೆಲ್ಲಾ ಮರೆತು ಬದುಕನ್ನು ನಿರಾಡಂಭರಾವಾಗಿ ಸಾಗಿಸುವುದಕ್ಕೆ ಬೇಕಾಗಿರುವುದು ಅಧಿಕಾರ–ಅಂತಸ್ತುಗಳಲ್ಲ, ಮಾನವೀಯ ಮೌಲ್ಯಗಳಷ್ಟೆ.

ಕೆಲವೊಮ್ಮೆ ನಮ್ಮ ಯೋಜನೆಗಳು ಕಾರ್ಯಗತಗೊಳ್ಳದೇ ನಿರಾಶೆ ಆವರಿಸಬಹುದು. ಸ್ವಲ್ಪ ಸಮಯ ಕಾಯಬೇಕಾಗುತ್ತದೆ. ಕಾಯುವುದೆಂದರೆ ಒಳಗೊಳಗೆ ಬೇಯುವುದಲ್ಲ ಸಹನೆಯೊಂದಿಗೆ ಮಾಗುವುದು. ಅಂತಹ ಸಂದರ್ಭದಲ್ಲಿ ತಾಳ್ಮೆಯೊಂದೇ ನಮ್ಮನ್ನು ಕೈಹಿಡಿಯುತ್ತದೆ. ಶಾಂತತೆಯಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಾಗ ದೊರೆಯುವ ಆನಂದಕ್ಕೆ ಬೆಲೆ ಕಟ್ಟಲಾಗುವುದಿಲ್ಲ. ನಾಳಿನ ಬಗ್ಗೆ ಇಂದು ಚಿಂತಿಸುತ್ತಾ ಹಿಂದಿನದನ್ನು ಮರೆಯಬಾರದು. ನಮ್ಮಂತೆ ಎಲ್ಲರೂ ಇರಬೇಕೆಂದು ಬಯಸಲೂಬಾರದು. ಎಲ್ಲವೂ ಯೋಚಿಸಿದಂತೆ ಇಲ್ಲಿ ನಡೆಯುವುದಿಲ್ಲವಾದ್ದರಿಂದ ಅದರಲ್ಲಿಯೇ ಸಾಕಷ್ಟು ಕಾಲ ಕಳೆಯಬಾರದು. ಆಯಾಕಾಲಕ್ಕೆ ತಕ್ಕಂತೆ ಸೂಕ್ತ ನಿರ್ಧಾರಗಳನ್ನು ತಡವಿಲ್ಲದೆ ತೆಗೆದುಕೊಳ್ಳಬೇಕು. ಪ್ರತಿಯೊಬ್ಬರಲ್ಲಿರುವ ಒಳ್ಳೆಯ ಗುಣಗಳನ್ನು ಗೌರವಿಸಿದರೆ ಎಲ್ಲರೂ ಇಷ್ಟವಾಗುತ್ತಾರೆ.

ಮಾನಸಿಕ ಸ್ಥಿತಿ ಹದಗೆಟ್ಟಾಗ ಅಡ್ಡದಾರಿ ಹಿಡಿಯುವ ಪ್ರಯತ್ನ ಮಾಡಲೇಬಾರದು. ಮನದ ಸ್ಥಿತಿ–ಗತಿಗಳನ್ನು ಅರ್ಥೈಸಿಕೊಂಡು ಯಾವ ಮೂಲದಿಂದ ಹೀಗಾಗಿದೆ ಅದನ್ನು ಯಾರಿಂದ? ಹೇಗೆ? ಯಾವಾಗ? ಎಲ್ಲಿ? ಬಗೆಹರಿಸಿಕೊಳ್ಳಬೇಕೆಂಬ ಆಲೋಚನೆ ಬಹಳ ಮುಖ್ಯ. ಪರಿಸ್ಥಿತಿಯ ಒತ್ತಡದಿಂದ ಎಲ್ಲರಿಗೂ ಕೆಲವು ಸಲ ಅಸಮಧಾನ ಉಂಟಾಗುವುದು ಸಹಜ. ಉತ್ಸಾಹ ಕಳೆದುಕೊಂಡ ಸಮಯದಲ್ಲಿ ನಮಗೆ ಸಮಾಧಾನವಾಗಬೇಕೆಂದಿದ್ದರೆ, ಉತ್ತಮ ಪುಸ್ತಕಗಳನ್ನು ಓದುವುದು, ಒಳ್ಳೆಯ ಸಂಗೀತ ಆಲಿಸುವುದು ಸಮಾನ ಮನಸ್ಸಿಗರೊಂದಿಗೆ ಬೆರೆಯುವುದು.

ಶಾಂತಿ–ನೆಮ್ಮದಿ ಬೇಕೆಂದಿದ್ದರೆ ಇತರರನ್ನು ದ್ವೇಷಿಸಬಾರದು. ನಮ್ಮನ್ನು ಎಲ್ಲರು ಇಷ್ಟಪಡಬೇಕೆಂದಿದ್ದರೆ ಯಾರನ್ನೂ ನೋಯಿಸಲು ಹೋಗಬಾರದು. ಮತ್ತೊಬ್ಬರ ಅಭಿಪ್ರಾಯಗಳಿಗೆ ಮನಸ್ಸು ಸ್ಪಂದಿಸದಿದ್ದರೆ ಬದುಕು ವಿಕಾಸವಾಗುವುದಾದರೂ ಹೇಗೆ?

ಕಷ್ಟದಲ್ಲಿದ್ದಾಗ, ಅನಾರೋಗ್ಯಕ್ಕೆ ಒಳಗಾದಾಗ, ಬೇಸರದಿಂದ ಮನ ಬಳಲಿದಾಗ ಮಿತ್ರರೇ ಆಗ ಆಧಾರ. ಆದ್ದರಿಂದ ಹೆಚ್ಚೆಚ್ಚು ಉತ್ತಮ ಗೆಳೆಯರನ್ನು ಸಂಪಾದಿಸಬೇಕು. ಸ್ನೇಹಿತರು ನಮ್ಮ ಸಮಸ್ಯೆಗಳಿಗೆ ಸ್ಪಂದಿಸಿದಾಗ ಒಂದು ಕೃತಜ್ಞತಾಭಾವ ಸೂಚಿಸಿದರೆ ಇದರ ಪರಿಣಾಮ ಅಗಾಧವಾಗಿರುತ್ತದೆ. ಆಗ ನಮ್ಮಲ್ಲಿಯೂ ಧನ್ಯತಾಭಾವ ಮೂಡುತ್ತದೆ.

ಎಲ್ಲದರಲ್ಲೂ ನಾವೇ ಬುದ್ಧಿವಂತರು ಎಂದುಕೊಂಡರೆ ನಮ್ಮೊಳಗಿನ ಅಹಂಕಾರ ಬುಸ್‌ಗುಡುತ್ತದೆ. ನಾವೆಷ್ಟು ಸಂತಸವಾಗಿದ್ದೇವೆ ಎಂಬುದಕ್ಕಿಂತಲೂ ನಮ್ಮಿಂದಾಗಿ ಬೇರೊಬ್ಬರು ಎಷ್ಟು ಸಂತಸವಾಗಿದ್ದಾರೆಂಬುದು ಮುಖ್ಯ. ಇತರರ ತಪ್ಪುಗಳು ಕಂಡಾಗ ಸಮಾಧಾನದಿಂದ ತಿಳಿಯಪಡಿಸಿದರೆ ಆಗ ಅವರ ಮೊಗದಲ್ಲಿ ನಗು ಅರಳುತ್ತದೆ.

# ಬದುಕಿನ ಪ್ರಗತಿಗೆ ಜಾಣತನ ಹೆಚ್ಚಿಸಿಕೋ.

## ಮೊಬೈಲ್, ಸಾಮಾಜಿಕ ಜಾಲತಾಣಗಳಲ್ಲಿ ಸ್ವಂತ ವಿಷಯಗಳು ಹಂಚಿಕೊಳ್ಳ ಬೇಡ | ಬಾಡಲಿದೆ ಬಾಹ್ಯ ಸೌಂದರ್ಯ ಚಿಂತಿಸದಿರು

## ಪ್ರೀತಿಯ ಮಗಳೇ,

ಹೇಗಿದ್ದೀಯಾ. ನೀನು ಬಿಡು ಸ್ನೇಹಿತರು ನಿನ್ನ ಮೊಬೈಲ್ ಫೋನ್ ಸೋಶಿಯಲ್ ಮೀಡಿಯಾ ಎಂದು ಹಾಯಾಗಿ ಇರ್ತೀಯಾ. ಅದು ನಿನ್ನ ವಯಸ್ಸಿಗೆ ಸಹಜವೂ ಹೌದು. ಆದರೆ ಈಗ ನಿನಗೆ ಪತ್ರ ಬರೆಯಲು ಕಾರಣ ಜೀವನದಲ್ಲಿ ನಿಮ್ಮ ಗುರಿಯಿಂದ ನಿಮ್ಮನ್ನು ವಿಚಲಿತಗೊಳಿಸುವ ಸ್ನೇಹಿತರು, ಪ್ರೀತಿ ಪ್ರೇಮದ ಭಾವಗಳು, ಸಾಮಾಜಿಕ ಜಾಲತಾಣಗಳು, ಮೊಬೈಲ್ ಫೋನ್ ಇವುಗಳ ಹೊರತಾಗಿಯೂ ಸಾಕಷ್ಟು ಬೇರೆ ವಿಷಯಗಳು ನಿಮ್ಮ ಕಿವಿಯಲ್ಲಿ ಗುಂಗಿ ಹುಳುವಿನಂತೆ ಗುಂಯ್ಗುಡುತ್ತಿರುತ್ತವೆ.

ಆದರೆ ಕೆಲ ವಿಷಯಗಳನ್ನು ನೀನು ಖಂಡಿತವಾಗಿಯೂ ಅರಿಯಬೇಕಾದ ಅವಶ್ಯಕತೆ ಇದೆ ಅವುಗಳನ್ನು ನಿನಗೆ ಹೇಳಲೆಂದೇ ಈ ಕಾಗದ. ಸರಿಯಾದ ನಿರ್ಣಯ ತೆಗೆದುಕೊಳ್ಳುವುದು ಬಹಳ ಮುಖ್ಯ... ನೀನು ತೆಗೆದುಕೊಳ್ಳುವ ಒಂದು ನಿರ್ಣಯ ನಿನ್ನ ಜೀವನದ ದಿಕ್ಕನ್ನು ಬದಲಾಯಿಸಬಹುದು. ಹಾಗೆ ನಿರ್ಣಯ ತೆಗೆದುಕೊಳ್ಳಲು ಧೈರ್ಯವೂ ಬೇಕು. ಯಾವುದೇ ಹೊಸ ವಿಷಯವನ್ನು ನೋಡುವಾಗ, ಕಲಿಯುವಾಗ ನಿನ್ನಲ್ಲಿರುವ ದುರ್ಬಲತೆಯನ್ನು ನೀನು ಮೆಟ್ಟಲು ಧೈರ್ಯವನ್ನು ಹೊಂದಿರಲೇಬೇಕು.

ನಿಮ್ಮ ಮನೆಯ ಅಡುಗೆ ಕೋಣೆಯಲ್ಲಿ ಎಲ್ಲರೊಂದಿಗೆ ಕುಳಿತು ಮಾತನಾಡುವಷ್ಟೇ ಸಲೀಸಾಗಿ ನೀನು ನಿನ್ನ ಸ್ವಂತ ವಿಷಯಗಳನ್ನು ಮೊಬೈಲ್ ನಲ್ಲಿ ಹಂಚಿಕೊಳ್ಳಬೇಡ. ಎಲ್ಲರೂ ಒಂದೇ ರೀತಿ ಇರುವುದಿಲ್ಲ ನೀನು ಹಂಚಿಕೊಳ್ಳುವ ವಿಷಯಗಳು ಬೇರೆ ಬೇರೆ ದೃಷ್ಟಿಕೋನದಲ್ಲಿ ನೋಡಲ್ಪಡುತ್ತವೆ. ಯಾವುದೇ ವಿಷಯವನ್ನು ಹಂಚಿಕೊಳ್ಳುವ ಮೊದಲು ಎರಡು ಬಾರಿ ಯೋಚಿಸು.

ಸಾಮಾಜಿಕ ಜಾಲತಾಣಗಳಲ್ಲಿ ನೀನು ಪಡೆಯುವ ಲೈಕಗಳು ಕಾಮೆಂಟ್ಗಳು ನಿನ್ನ ಬದುಕಿಗೆ ಪ್ರಗತಿಯನ್ನು ಕೊಡುವುದಿಲ್ಲ. ನಿನ್ನ ಬದುಕಿನ ಪ್ರಗತಿಗಾಗಿ ನಿನ್ನ ಜಾಣತನವನ್ನು ಹೆಚ್ಚಿಸಿಕೋ. ಹೊಸ ವಿಷಯಗಳ ಕಲಿಕೆಯ ಮೂಲಕ ನಿನ್ನ ಜ್ಞಾನದ ಹರಹನ್ನು ಹೆಚ್ಚಿಸಿಕೋ. ಬೇರೆಯವರು ನಿನ್ನ ಕುರಿತು ಗೌರವಯುತವಾಗಿ ಯೋಚಿಸುವ ಪ್ರೀತಿಯಲ್ಲಿ ನಿನ್ನ ಬದುಕನ್ನು ರೂಪಿಸಿಕೋ. ಮೆದುಳಿನ ಬೆಳವಣಿಗೆ ಮತ್ತು ಹೃದಯ ವೈಶಾಲ್ಯತೆಯನ್ನು ಬೆಳೆಸಿಕೊಂಡರೆ ಸಾಕು ಉಳಿದೆಲ್ಲ ವಿಷಯಗಳು ನಿನ್ನ ಬದುಕಿನಲ್ಲಿ ಸುಗಮವಾಗಿ ಸಾಗುತ್ತವೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಬೇರೆಯವರಲ್ಲಿರುವ ಕುಂದು ಕೊರತೆಗಳನ್ನು ಎಣಿಸದೆ ಅವರಲ್ಲಿರುವ ಒಳ್ಳೆಯ ಗುಣಗಳನ್ನು ಮಾತ್ರ ಅವಲೋಕಿಸು. ಎಲ್ಲರೂ ಸ್ವಾರ್ಥಿಗಳಾಗಿರುವುದಿಲ್ಲ ಎಲ್ಲರೂ ನಿನ್ನ ಕುರಿತು ಮಾತನಾಡುವುದಿಲ್ಲ... ಒಂದೊಮ್ಮೆ ಬಹಳಷ್ಟು ಜನರು ನಿನ್ನ ಕುರಿತು ಮಾತನಾಡುತ್ತಿದ್ದಾರೆ ಎಂದಾದರೆ ನಿನ್ನ ವರ್ತನೆಯ ಬಗ್ಗೆ ನೀನು ಕೊಂಚ ಅವಲೋಕನ ಒಂದು ಮಾಡು.... ನಮ್ಮ ಬೆನ್ನು ನಮಗೆ ಕಾಣುವುದಿಲ್ಲ ಅಲ್ಲವೇ?

ನಿನ್ನ ಮನದ ಪಿಸುಮಾತುಗಳಿಗೆ ನೀನೇ ಗಟ್ಟಿ ದನಿಯಾಗಬೇಕು. ನಿನ್ನ ಒಳಿತು ಕೆಡುಕುಗಳನ್ನು ನಿನ್ನ ಪಾಲಕರು ಸರಿಯಾಗಿಯೇ ಯೋಚಿಸಿರುತ್ತಾರೆ ಆದ್ದರಿಂದ ಅವರ ಮಾತುಗಳಲ್ಲಿ ಬಹಳ ಗಮನವಿರಲಿ

ಅನುಕರಣೆ ಬೇಡ... ಬಹಳಷ್ಟು ಹೆಣ್ಣು ಮಕ್ಕಳನ್ನು ನೋಡಿದಾಗ ನನಗೆ ಅನ್ನಿಸುವುದು ಇಷ್ಟೇ. ಯಾರೋ ಬೇರೆಯವರನ್ನು ಅನುಕರಿಸಲು ಹೋಗಿ ತಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುವ ಹೆಣ್ಣು ಮಕ್ಕಳನ್ನು ನೋಡಿದಾಗ ಮರುಕ ಎನಿಸುತ್ತದೆ. ಬೇರೆಯವರಾರೋ ಧರಿಸಿದಂತ ಬಟ್ಟೆಗಳನ್ನು ನಮಗೆ ಮುಜುಗುರವಾದರೂ ಧರಿಸಿ, ಅವರಂತೆ ಸೆಲ್ಫಿ ತೆಗೆದುಕೊಂಡು ಅವರ ಹಾವಭಾವಗಳನ್ನು ಅನುಕರಿಸುವುದರಿಂದ ನಾವು ಅವರಾಗುವುದಿಲ್ಲ ಎಂಬ ಸತ್ಯವನ್ನು ಅರಿಯದ ಬಹಳಷ್ಟು ಜನ ಹೆಣ್ಣು ಮಕ್ಕಳು ತಮ್ಮ ವ್ಯಕ್ತಿತ್ವವನ್ನು ತಮ್ಮ ಕಣ್ಣಲ್ಲಿಯೇ ಕುಬ್ಜಗೊಳಿಸಿಕೊಳ್ಳುತ್ತಾರೆ.


ಈ ಜಗತ್ತಿನಲ್ಲಿ ನಿನ್ನಂತೆ ಬೇರೊಬ್ಬರಿಲ್ಲ... ನೀನೊಂದು ಅದ್ಭುತ ಸೃಷ್ಟಿ ಎಂದು ಅರಿತು ನೀನು ನೀನಾಗಿಯೇ ನಿನ್ನ ವ್ಯಕ್ತಿಗತ ಮೌಲ್ಯವನ್ನು ವರ್ಧಿಸಿಕೊ... ಬಿ ದ ಬೆಸ್ಟ್ ವರ್ಷನ್ ಆಫ್ ಯುವರ್ಸೆಲ್ಫ್. ನಿಮ್ಮದಲ್ಲದ ವ್ಯಕ್ತಿತ್ವವನ್ನು ನೀವೆಂದು ಎಂದೂ ಬಿಂಬಿಸಲು ಪ್ರಯತ್ನಿಸಬೇಡ. ನಿನ್ನದೇ ಆದ ಸ್ವಂತ ವ್ಯಕ್ತಿತ್ವವನ್ನು ಬೆಳೆಸಿಕೊ. ಬೇರೆಯವರಂತೆ ನೀನು ನಿನ್ನ ಬಾಹ್ಯ ಸ್ವರೂಪವನ್ನು ಬದಲಿಸಿಕೊಳ್ಳಬಹುದು... ಆದರೆ ಆಂತರಿಕವಾಗಿ ನೀನು ನೀನೇ ಆಗಿರುವೆ. ಬೇರೆಯವರನ್ನು ಮೆಚ್ಚಿಸಲು ನಿನ್ನನ್ನು ನೀನು ಬದಲಿಸಿಕೊಳ್ಳಬೇಡ. ಅಸಹಾಯಕಿ ಮತ್ತು ಮುಗ್ಧೆ ನೀನಲ್ಲ ಆದರೂ ಹಾಗೆ ನಿನ್ನನ್ನು ನೀನು ಬಿಂಬಿಸಿಕೊಳ್ಳದೆ ಇದ್ದರೆ ನಿನಗೂ ಕ್ಷೇಮ

ನಿನ್ನ ಸಂತೋಷಕ್ಕೆ ನೀನೇ ಕಾರಣವಾಗು.... ಬೇರೆಯವರು ನಿನ್ನನ್ನು ಖುಷಿ ಪಡಿಸಲಿ ಎಂದು ಆಶಿಸಬೇಡ. ನಿನ್ನ ಸಂತೋಷದ ಆಯ್ಕೆ ಕಷ್ಟವಾದರೂ ಪರವಾಗಿಲ್ಲ ನಿನ್ನ ಜೀವನದಲ್ಲಿ ತುಂಬಿರುವ ! ನಿರ್ವಾತವನ್ನು ಹೊರಹಾಕಲು ಅತಿಯಾದ ಜಂಕ್ ಫುಡ್, ಡ್ರಗ್ಸ್ ಮುಂತಾದ ಮಾದಕ ಪದಾರ್ಥಗಳನ್ನು ಹತ್ತಿರಕ್ಕೂ ಸೇರಿಸಬೇಡ. ಒಳ್ಳೆಯ ಹವ್ಯಾಸಗಳನ್ನು ಆಯ್ದುಕೊಂಡು, ಉತ್ತಮ ಸ್ನೇಹಿತರ ಜೊತೆ ನಿನ್ನ ಗುರಿ ಸಾಧನೆಯ ಮೆಟ್ಟಿಲನ್ನು ಏರಲು ಪ್ರಯತ್ನಿಸು.

ಒಡಹುಟ್ಟಿದವರು ಮತ್ತು ಸ್ನೇಹಿತರನ್ನು ಎಂದೂ ಅಲಕ್ಷಿಸಬೇಡ.... ಅವರ ಉಪಸ್ಥಿತಿ ನಿನ್ನ ಬದುಕಿನಲ್ಲಿ ಅತ್ಯವಶ್ಯಕ ಎಂಬ ಅರಿವಿರಲಿ.. ಸಾಮಾಜಿಕ ಜಾಲತಾಣವೆಂಬ ಭ್ರಮೆಯ ಜಗತ್ತಿನಲ್ಲಿ ಸಾವಿರ ಜನರಿದ್ದರೂ ಸಮಯಕ್ಕೆ ಆಗುವುದು ವಾಸ್ತವ ಬದುಕಿನ ಸ್ನೇಹಿತರು, ಸಂಬಂಧಿಗಳು ಮಾತ್ರ.

ನೀನು ನೀನಾಗಿರು....ನೀನು ಹೇಗಿರುವೆಯೋ ಹಾಗೆಯೇ ಇರು. ಬೇರೆಯವರು ನೀನು ಅಸಮರ್ಥಳು ಎಂದು ನೂರು ಬಾರಿ ಹೇಳಬಹುದು... ಆದರೆ ನಿನ್ನ ಸ್ವ ಸಾಮರ್ಥದ ಅರಿವು ನಿನಗಿರಲಿ. ಹಲವಾರು ಶೇಡ್ ಗಳನ್ನು, ಫೋಟೋಶಾಪ್ ಗಳನ್ನು, ಬ್ಯೂಟಿ ಪ್ಲಸ್ ಗಳನ್ನು ಅಳವಡಿಸಿ ನಿನ್ನನ್ನು ನೀನು ಸುಂದರವಾಗಿಸಿಕೊಳ್ಳಬಹುದು... ಆದರೆ ನಿನ್ನ ನಿಜದ ಸೌಂದರ್ಯ ನಿನ್ನ ಗಟ್ಟಿಯಾದ ವ್ಯಕ್ತಿತ್ವದಲ್ಲಿದೆ ಎಂಬುದು ನಿನಗೆ ನೆನಪಿರಲಿ.

ನಿನ್ನ ಕೂದಲು ಚೆನ್ನಾಗಿಲ್ಲ, ಹಲ್ಲುಗಳು ಬೆಳ್ಳಗೆ ಶುಭ್ರವಾಗಿಲ್ಲ, ನೀನು ಸ್ಥೂಲಕಾಯಳು, ಎತ್ತರ ತುಸು ಕಮ್ಮಿ, ಹಣೆಯ ಭಾಗ ದೊಡ್ಡದಾಗಿದೆ, ನೀನು ಹಾಕಿರುವ ಬಟ್ಟೆಗಳು ಔಟ್ ಡೇಟೆಡ್ ಆಗಿದ್ದು ನೀನು ಧರಿಸಿರುವ ಶೂಗಳು ಅತ್ಯಂತ ಕಡಿಮೆ ಬೆಲೆಯವಾಗಿವೆ, ಕೆಟ್ಟದಾಗಿ ಕೂಗಾಡಿ ಮಾತನಾಡುತ್ತೀಯಾ ಹೀಗೆ ಹತ್ತು ಹಲವು ಮಾತುಗಳನ್ನು ನೀನು ಪರರಿಂದ ಕೇಳಿಸಿಕೊಳ್ಳಬೇಕಾಗುತ್ತದೆ.... ನಕ್ಕು ಸುಮ್ಮನಾಗಿಬಿಡು. ನೀನು ಹೇಗೆ ಇದ್ದರೂ ನಿನಗೆ ನೀನೇ ವಿಶ್ವ ಸುಂದರಿ. ನಿನ್ನೆಲ್ಲಾ ದೈಹಿಕ ರೂಪವನ್ನು



ಹಿಂದಿಕ್ಕಿ ನಿನ್ನ ವ್ಯಕ್ತಿತ್ವದ ಅಂತರಂಗಿಕ ಸ್ವರೂಪವನ್ನು ಸುಂದರವಾಗಿಸಿಕೊ. ಈ ಜಗತ್ತಿಗೆ ನೀನು ಒಂದು ಒಳ್ಳೆಯ ಕೊಡುಗೆಯಾಗು.

ಇನ್ನೂ ಗೊತ್ತಾಗದಿದ್ದರೆ ಕೇಳು... ನಿನ್ನಮ್ಮನಾಗಿ ನನಗೆ ನೀನು ಹೇಗಿದ್ದರೂ ಚೆನ್ನ. ಒಂದು ಹಂತದ ನಂತರ ಬಾಹ್ಯ ಸೌಂದರ್ಯ ನಶಿಸಿ ಹೋಗುತ್ತದೆ ಅಂತರಂಗ ಬಹಿರಂಗಗಳಲ್ಲಿ ನೀನು ಸ್ವಚ್ಛ ಶುದ್ಧ ಮನಸ್ಸಿನ ಪ್ರೀತಿಸುವ ತಾಯಿ ಹೃದಯದ ಆದರೆ ಅಷ್ಟೇ ಆತ್ಮವಿಶ್ವಾಸ, ಸ್ವಯಂ ಪ್ರೀತಿಯನ್ನು ಹೊಂದಿರುವ ವ್ಯಕ್ತಿಯಾಗಿ ಬೆಳೆದು ನಿಲ್ಲು.

ಬದುಕಿನ ಮುಂಜಾನೆಯ ಎಳೆ ಬಿಸಿಲಿನಲ್ಲಿ ನಿಂತಿರುವ ನಿನಗೆ ಬದುಕಿನ ಬರ ಬಿಸಿಲುಗಳು, ಹಲವಾರು ಏರಿಳಿತಗಳು ಸಾಲುಗಟ್ಟಿ ನಿಂತಿದೆ. ಮುಂದಿನ ಹಲವಾರು ವರ್ಷ ಬದುಕಿನ ಎಲ್ಲ ತಿರುವುಗಳನ್ನು ನೀನು ಸಾಗಲೇಬೇಕಿದ್ದು ನಿನ್ನ ಬೆಂಬಲಕ್ಕೆ ನಾವು ಇದ್ದೇ ಇರುತ್ತೇವೆ. ನೆರಳಾಗಿ ನಿನ್ನನ್ನು ಕಾಯುತ್ತೇವೆ.. ನಿನ್ನೆಲ್ಲ ಕಷ್ಟ ಸುಖಗಳಲ್ಲಿ ನಾವು ಪಾಲುದಾರರಾಗಿದ್ದೇವೆ ಎಂಬುದನ್ನು ನೆನಪಿನಲ್ಲಿಟ್ಟುಕೋ. ಪತ್ರ ತುಸು ದೊಡ್ಡದೇ ಆಯಿತು... ಇರಲಿ ನನ್ನ ಮನದಾಳದ ಎಲ್ಲ ಮಾತುಗಳನ್ನು ನಿನಗೆ ತಿಳಿಸಿರುವೆ.

ಇಂತಿ ಸದಾ ನಿನ್ನ ಯಶಸ್ಸನ್ನು ಬಯಸುವ ... ಅಮ್ಮ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕೆಲಸ

ನ್ಯಾಯ ನೀತಿಯಿಂದ ಮಾಡಿದರೆ ಕೆಲಸ
ಜನರ ಮನದಲಿ ನೆಲೆಯೂರುವರು
ಅನುದಿವಸ
ಜನಾನುರಾಗಿಯಾಗಿ ಮಾಡಿದ ಕಾರ್ಯ
ತುಂಬುವುದು ಜನಮನಕ್ಕೆ ಸ್ಥೈರ್ಯ

ಕಾಯಕವೇ ಕೈಲಾಸ ಎಂದು ತಿಳಿದಿರು
ಮೈ ಮುರಿದು ದುಡಿಯಲು ಮರೆಯದಿರು
ಕೆಲಸ ಮಾಡಲು ನೆಪವ ಹುಡುಕದಿರು
ಕೈ ಕೆಸರಾದರೆ ಆಗುವುದು ಬಾಯಿ
ಮೊಸರು


ನಾವು ಮಾಡುವ ಕೆಲಸ
ಸೆಳೆಯಬೇಕು ಇತರರ ಮನಸ
ಪ್ರತಿಯಾಗಿ ದೊರೆಯುವುದು ಉಲ್ಲಾಸ
ಅನುದಿನವೂ ಇರುವುದು ಸಂತಸ

**– ಚೇತನ ಭಾರ್ಗವ, ಬೆಂಗಳೂರು**

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

# ಅಂಗನವಾಡಿ ಕಾರ್ಯಕರ್ತರ ಗೌರವಧನ ಹೆಚ್ಚಿಸಲು ಆಗ್ರಹ

## ಅಂಗನವಾಡಿ ಕಾರ್ಯಕರ್ತೆಯರಿಂದ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರಿಗೆ ಮನವಿ




■ ಹಂಪಿ ಟೈಮ್ಸ್ ಕೂಡ್ಲಿಗಿ

ಪ್ರಸಕ್ತ ಬಜೆಟ್ ನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗೌರವಧನ ಹೆಚ್ಚಿಸುವಂತೆ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಶನ್ ತಾಲೂಕು ಪದಾಧಿಕಾರಿಗಳು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಚ್.ವೀರಣ್ಣ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಸರ್ಕಾರ ಜಾರಿಗೊಳಿಸುವ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 1957 ರಲ್ಲಿ ರೂಪಿಸಿರುವ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು 50 ವರ್ಷ ಸಾಗಿ ಸುವರ್ಣ ಸಂಭ್ರಮದತ್ತ ಮುಂದಡಿ ಇಡುತ್ತಿದೆ. ರಾಜ್ಯದ 1ಲಕ್ಷದ 40 ಸಾವಿರ ಮಹಿಳಾ ನೌಕರರು ಸೇರಿದಂತೆ ದೇಶದಲ್ಲಿ 28 ಲಕ್ಷದಷ್ಟು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ದೀನ, ದುರ್ಬಲ ವರ್ಗದ ಮಕ್ಕಳ ಪೌಷ್ಟಿಕ ಆಹಾರ,ಲಾಲನೆ, ಪಾಲನೆ,ಆರೋಗ್ಯ, ಶಾಲಾ ಪೂರ್ವ ಶಿಕ್ಷಣ ನೀಡುವುದು ಸೇರಿದಂತೆ ಗರ್ಭಿಣಿ, ಬಾಣಂತಿಯರ ಪೂರಕ ಪೌಷ್ಟಿಕ ಆಹಾರ ಮತ್ತು ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಮೂಲಕ ಮಕ್ಕಳು ಮತ್ತು ಮಹಿಳೆಯರಲ್ಲಿ ಅಪೌಷ್ಟಿಕತೆ ಹಾಗೂ ರಕ್ತ ಹೀನತೆಯಂತಹ ಸಮಸ್ಯೆಗಳನ್ನು ನಿವಾರಿಸಲು ಸೈನಿಕರಂತೆ ಸೇವೆ ಸಲ್ಲಿಸುತ್ತಿದ್ದಾರೆ. ನಿಸ್ವಾರ್ಥತೆಯಿಂದ ದುಡಿಯುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ. ಕನಿಷ್ಠ ಪ್ರಮಾಣದ ಗೌರವಧನ ನೀಡುವ ಸರ್ಕಾರಗಳು ಅವರ ಕೆಲಸವನ್ನು ಕೇವಲ ಗೌರವಸೇವೆ ಎಂದು ಪರಿಭಾವಿಸಿ ಬದುಕಲು ಬೇಕಾದಷ್ಟು ಸಂಭಾವನೆ ನೀಡುತ್ತಿಲ್ಲ. ಈ ಬಗ್ಗೆ ಗುಜರಾತ್ ಉಚ್ಚ ನ್ಯಾಯಾಲಯ ಇತ್ತೀಚೆಗೆ ನೀಡಿರುವ ತೀರ್ಪಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರಿಗೆ ಕನಿಷ್ಠ ವೇತನ ನಿಗದಿಗೊಳಿಸಿ ಜಾರಿಗೊಳಿಸಬೇಕೆಂದು ನಿರ್ದೇಶಿಸಿದೆ. ಚುನಾವಣಾ ವೇಳೆ ಕಾಂಗ್ರೆಸ್ ಸಂಸದೆ ಪ್ರಿಯಾಂಕ ಗಾಂಧಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಚುಕ್ಕಾಣಿ ಹಿಡಿದರೆ ಕಾರ್ಯಕರ್ತೆಯರಿಗೆ ಮಾಸಿಕ 15 ಸಾವಿರ, ಸಹಾಯಕಿಯರಿಗೆ 10 ಸಾವಿರ ನೀಡುವ ಆರನೇ ಗ್ಯಾರಂಟಿ ಘೋಷಿಸಿದರು. ಆದರೆ ಇದುವರೆಗೂ ಆರನೇ ಗ್ಯಾರಂಟಿ ಜಾರಿಯಾಗಿಲ್ಲ, ಈ ಕುರಿತು ತಾವುಗಳು ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮುಖ್ಯಮಂತ್ರಿಗಳ ಗಮನ ಸೆಳೆಯಬೇಕು ಎಂದು ತಿಳಿಸಿದರು. ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮನವಿ ಸ್ವೀಕಾರ ಮಾಡಿದರು. ಎಐಟಿಯುಸಿ ತಾಲೂಕು ಅಧ್ಯಕ್ಷೆ ಎನ್.ಸುಮಾ, ಉಪಾಧ್ಯಕ್ಷೆ ಕೆ.ಎನ್.ಕವಿತ, ಪ್ರಧಾನ ಕಾರ್ಯದರ್ಶಿ ಎಚ್.ಅನ್ನಪೂರ್ಣ, ಖಜಾಂಚಿ ಮಹಾಂತಮ್ಮ, ಸಂಘಟನಾ ಕಾರ್ಯದರ್ಶಿ ಜಿ.ಟಿ.ಮೀನಾಕ್ಷಿ, ಸದಸ್ಯರಾದ ಕೆ.ಪದ್ಮಾವತಿ, ಎಸ್.ಶಕುಂತಲಾ, ಶಿವಲೀಲಾ, ಜಿ.ಗಾಯಿತ್ರಿ, ಎಚ್.ಎಸ್.ಚಂದ್ರಮ್ಮ, ಜೆ.ಜಯಮಾಲ, ಎನ್.ರತ್ನಮ್ಮ, ದಾಕ್ಷಾಯಿಣಿ ಇದ್ದರು.

## ಜ.24 ರಂದು ಕೆಕೆಎಸ್ ಆರ್ ಟಿಸಿಯಿಂದ ಚಾಲಕರ ದಿನಾಚರಣೆ.

■ ಹಂಪಿ ಟೈಮ್ಸ್ ಹೊಸಪೇಟೆ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಹೊಸಪೇಟೆ ವಿಭಾಗದಿಂದ ಜ.24 ರಂದು 'ಚಾಲಕರ ದಿನ' ಆಚರಿಸಲಾಗುತ್ತದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ಹೀರಾ ತಿಳಿಸಿದ್ದಾರೆ.

ಚಾಲಕರ ದಿನಾಚರಣೆ ನಿಮಿತ್ತ ಅತ್ಯುತ್ತಮ ಹಾಜರಾತಿ ಮತ್ತು 5 ವರ್ಷ ಅಪಘಾತ ರಹಿತ ಸುರಕ್ಷತಾ ಚಾಲನೆ ಮಾಡಿದ ಚಾಲಕರನ್ನು ಗುರುತಿಸಿ ನಗದು ಪುರಸ್ಕಾರದೊಂದಿಗೆ ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆಯನ್ನು ನೀಡಲಾಗುತ್ತದೆ. ಅತ್ಯುತ್ತಮ ಹಾಜರಾತಿ ಹೊಂದಿದ ಚಾಲಕ ಮತ್ತು ನಿರ್ವಾಹಕರುಗಳಿಗೆ ಹೊಸಪೇಟೆ ವಿಭಾಗದ ಎಲ್ಲಾ ಚಾಲಕರಿಗೆ ಅಯಾ ಘಟಕಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ಸ್ಥಳೀಯ ಶಾಸಕರು, ಅಧಿಕಾರಿಗಳಿಂದ, ಗಣ್ಯ ವ್ಯಕ್ತಿಗಳಿಂದ, ವಿದ್ಯಾರ್ಥಿ ಸಮುದಾಯಗಳಿಂದ ಸುರಕ್ಷಿತ ಚಾಲನೆ ಮಾಡಿದ್ದಕ್ಕಾಗಿ ತಮಗೆ ಧನ್ಯವಾದಗಳು ಎಂಬ ಧ್ಯೇಯ ವಾಕ್ಯದೊಂದಿಗೆ ಹೂಗೂಚ್ಛ, ಪ್ರಶಸ್ತಿ ನೀಡುವ ಮೂಲಕ ಪ್ರೋತ್ಸಾಹಿಸಿ ಗೌರವಿಸುವ ಜೊತೆಗೆ ಜಾಥಾಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾರ್ಚ್ 8 ರಾಷ್ಟ್ರೀಯ ಲೋಕ ಅದಾಲತ್ - ನ್ಯಾ. ಮಹಾಂತೇಶ್ ಎಸ್. ದರಗದ

■ ಹಂಪಿ ಟೈಮ್ಸ್ ಕೊಪ್ಪಳ

ಮಾರ್ಚ್ 8 ರಂದು ಕೊಪ್ಪಳ ಜಿಲ್ಲೆಯಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗುತ್ತಿದ್ದು, ಇದರ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕೊಪ್ಪಳದ ಮಹಾಂತೇಶ್ ಎಸ್. ದರಗದ ಹೇಳಿದರು.

ಅವರು ಗುರುವಾರ ಮಾರ್ಚ್ 8 ರಂದು ನಡೆಯಲಿರುವ ರಾಷ್ಟ್ರೀಯ ಲೋಕ ಅದಾಲತ್ ಮಾಹಿತಿ ಸಾರ್ವಜನಿಕರಿಗೆ ನೀಡಲು ಕೊಪ್ಪಳ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಛೇರಿ ಸಭಾಂಗಣದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. >>4

ಈ ಬಾರಿ ಫಲಿತಾಂಶ ನಮ್ಮದೇ
**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–9

ಹೆಚ್ಚಿನ ಅಂಕ ಗಳಿಸಲು ವಾರ್ಷಿಕ ಪರೀಕ್ಷೆಗೆ ಇಂದಿನಿಂದಲೇ ಸಿದ್ಧರಾಗೋಣ...

**ವಿಷಯ:** ನೆಫ್ರಾನ್ ನ ರಚನೆಯನ್ನು ತೋರಿಸುವ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ.

**ಸೂಚನೆ:** ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಸಲು ಮನವಿ.

**24–01–2025**

ರಾಜ್ಯಾದ್ಯಂತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.

**ವಾಟ್ಸ್ಪ್ ನಂ: 99726 03099 ಗೆ ಶಾಲೆಯ ದಿ ಬೆಸ್ಟ್ ಚಿತ್ರ ಕಳಿಸಿ**

**ವಾಟ್ಸ್ಪ್ ನಂ: 94486 33038 ಗೆ ಶಾಲೆಯಲ್ಲಿ ಚಿತ್ರ ಬಿಡಿಸುವ ಸಾಮೂಹಿಕ ಫೋಟೊ ಕಳಿಸಿ**

# ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ । ವಿದೇಶಿ ವಿವಿಗಳಲ್ಲಿ ಪದವಿ ವ್ಯಾಸಂಗ ವೇತನ
## ಹಿ.ವ.ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಭಾನುಮತಿ ಹೇಳಿಕೆ । ಫೆ.5ರವರೆಗೆ ವಿಸ್ತರಣೆ

■ ಹಂಪಿ ಟೈಮ್ಸ್ ಬಳ್ಳಾರಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತ್ತಕೋತ್ತರ ಪದವಿ ಹಾಗೂ ಪಿ.ಹೆಚ್ಡಿ ಪದವಿ ವ್ಯಾಸಾಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಹಾಗೂ 3ಬಿ ವರ್ಗಗಳ ಅರ್ಹ ವಿದ್ಯಾರ್ಥಿಗಳಿಂದ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಪಡೆಯಲು ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಸಲ್ಲಿಕೆ ಅವಧಿಯನ್ನು ಫೆ.05 ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಭಾನುಮತಿ ಅವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್ https://bcwd.karnataka.gov.in/ ಅಥವಾ ಸಹಾಯವಾಣಿ 8050770004 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ವಿಜಯನಗರ ಜಿಲ್ಲೆ

ಸಂಖ್ಯೆ:– ಎನ್.ಹೆಚ್.ಎಂ/ಆರ್.ಸಿ.ಹೆಚ್/ನೇಮಕಾತಿ/ /2024–25 ದಿನಾಂಕ:– 20..01.2025

### ನೇಮಕಾತಿ ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ವಿಜಯನಗರ ಜಿಲ್ಲೆಯ ನಮ್ಮ ಕ್ಲಿನಿಕ್‌ಗಳಿಗೆ ಹೊಸದಾಗಿ ಮಂಜೂರಾಗಿರುವ ವಿವಿಧ ಹುದ್ದೆಗಳನ್ನು ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸಲ್ಲಿಸಲು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರ ಈ ಕೆಳಗಿನಂತಿರುತ್ತವೆ.

| ಕ್ರ. ಸಂ | ಹುದ್ದೆ | ಕನಿಷ್ಠ ವಿಧ್ಯಾರ್ಹತೆ ಮತ್ತು ಆಯ್ಕೆ ವಿಧಾನ | ಒಟ್ಟು ಹುದ್ದೆ | ಮಿಸಲಾತಿ ವಿವರ | ಮಾಸಿಕ ಸಂಚಿತ ವೇತನ |
|---|---|---|---|---|---|
| 01 | ವೈದ್ಯಾಧಿಕಾರಿಗಳು | ಎಂ.ಬಿ.ಬಿ.ಎಸ್.ಎಸ್ ಪೂರ್ಣ ಗೊಳಿಸಿರುವ ಕಡ್ಡಾಯವಾಗಿ ಇಂಟರ್ ಶಿಪ್ ಮುಗಿಸಿರುವ ಮತ್ತು ಕರ್ನಾಟಕ ಮೇಡಿಕಲ್ ಕೌನ್ಸಿಲ್‌ನಲ್ಲಿ ನೊಂದಾಯಿತರಾದ ಸ್ಥಳಿಯ ರಾಜ್ಯ ಭಾಷ ತಿಳಿದಿರುವ ಅಭ್ಯರ್ಥಿಯಾಗಿರಬೇಕು. 2. ವಯೋಮಿತಿ:– 70 ವರ್ಷಕ್ಕಿಂತ ಕಡಿಮೆ ಇರತಕ್ಕದ್ದು. | 10 | – | ರೂ.60.000/– |
| 02 | ಪ್ರಯೋಗಶಾಲಾ ತಂತ್ರಜ್ಞರು | 1) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯು ನಡೆಸುವ ಪ್ರಯೋಗಶಾಲಾ ತಂತ್ರಜ್ಞತೆಯಲ್ಲಿ ಮೂರು ವರ್ಷದ ಡಿಪ್ಲೋಮಾ ಕೋರ್ಸನಲ್ಲಿ ಉತ್ತೀರ್ಣ ಹೊಂದಿರಬೇಕು. ಅಥವಾ 2) ದ್ವೀತಿಯ ಪಿ.ಯು.ಸಿ.ಯಲ್ಲಿ ವಿಜ್ಞಾನ ವಿಷಯದಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯು ನಡೆಸುವ 2 ವರ್ಷಗಳ ಪ್ರಯೋಗಶಾಲಾ ತಂತ್ರಜ್ಞರ ತರಬೇತಿ ಪಡೆದಿರಬೇಕು. 3) ಪ್ರಯೋಗಶಾಲಾ ತಂತ್ರಜ್ಞರು ಕಡ್ಡಾಯವಾಗಿ ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯಲ್ಲಿ ನೋಂದಣಿ ಆಗಿರಬೇಕು. ಹಾಗೂ ಕಂಪ್ಯೂಟರ್ ಸಾಕ್ಷರತೆಯನ್ನು ಹೊಂದಿರತಕ್ಕದ್ದು ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರ ಹೊಂದಿರಬೇಕು. | 10 | ಕಲ್ಯಾಣ ಕರ್ನಾಟಕ–08<br>SC-OTHERS -1<br>GM-OTHERS- 1<br>ST-OTHERS-1<br>GM-FEMALE-1<br>CAT-1 OTHERS -1<br>GM-RURAL-1<br>CAT-2 A OTHERS -1<br>GM-PH- 1<br>ಕಲ್ಯಾಣ ಕರ್ನಾಟಕೇತರ–02<br>SC-OTHERS -1<br>GM-OTHERS-1 | ರೂ.13,812/– |

**ಸೂಚನೆ:**– 1. ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚುಗೊಳಿಸುವುದು ಅಥವಾ ಕಡಿಮೆಗೊಳಿಸುವುದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ನಿರ್ಧಾರದಂತಿರುತ್ತದೆ. 2. ಆಯ್ಕೆಯ ಪ್ರಕ್ರಿಯೆ ಯಾವುದೇ ಬದಲಾವಣೆಯಾದರು ಆಯ್ಕೆ ಸಮಿತಿ ತಿರ್ಮಾನವೇ ಅಂತಿಮವಾಗಿರುತ್ತದೆ. 3. ಎಂ.ಬಿ.ಬಿ.ಎಸ್ ವೈದ್ಯಾಧಿಕಾರಿಗಳ ಹುದ್ದೆಗಳ ಸಂಖ್ಯೆ ತುಂಬುವವರೆಗ Walk in Interview ಮೂಲಕ ಆಯ್ಕೆ ಪ್ರಕ್ರಿಯೆ ಮಾಡಲಾಗುವುದು. 4. ಅರ್ಜಿಗಳು ದೊರೆಯುವ ಮತ್ತು ಸ್ವೀಕರಿಸುವ ದಿನಾಂಕ:–20/01/2025 ರಿಂದ 30/01/2025 ರವರಗೆ ಕಛೇರಿಯ ಸಮಯದಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಲಯ 60 ಹಾಸಿಗೆಯ ಎಮ್.ಸಿ.ಹೆಚ್ ಆಸ್ಪತ್ರೆ ಹಿಂಬಾಗ ಮಸೀದಿ ಹತ್ತಿರ ಹೊಸಪೇಟೆ. ಸಂಜೆ 05:30 ರ ಒಳಗೆ ಸ್ವೀಕರಿಸಲಾಗುವುದು. ದಿನಾಂಕ : 30/01/2025 ರ ಸಂಜೆ 05:30 ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

**ಸಹಿ/– ಉಪಾಧ್ಯಕ್ಷರು**
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸಂಘ, ವಿಜಯನಗರ ಜಿಲ್ಲೆ.

**SSLC** ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ
HAMPI TIMES MARGADARSHI
ಪರೀಕ್ಷೆಗೆ ನಾವು ಸಿದ್ಧ 56 ದಿನ
https://epaper.hampitimes.com
ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

### ವಿಜ್ಞಾನ ಮಾದರಿ ಪ್ರಶ್ನೆ ಪತ್ರಿಕೆ

ಸಮಯ : 40 ನಿಮಿಷ ಅಂಕಗಳು : 40

#### ಭಾಗ – A (ಭೌತವಿಜ್ಞಾನ)

1. ವಿದ್ಯುತ್‌ಮಂಡಲದಲ್ಲಿ ರೋಧವನ್ನು ಬದಲಾಯಿಸಲು ಬಳಸುವ ಸಾಧನ
 A.ವೋಲ್ಟ್ ಮೀಟರ್ B. ಅಮ್ಮೀಟರ್
 C. ಗ್ಯಾಲ್ವನೋಮೀಟರ್ D. ರಿಯೋಸ್ಟಾಟ್
2. ಈ ಕೆಳಗಿನವುಗಳಲ್ಲಿ ಪೀನಮಸೂರದ ಒಂದು ಗುಣ ಇದು.
 A. ಬೆಳಕಿನ ಕಿರಣಗಳನ್ನು ವಿಕೇಂದ್ರಿಕರಿಸುತ್ತದೆ
 B. ಅಂಚುಗಳಲ್ಲಿ ದಪ್ಪನಾಗಿದ್ದು ಮಧ್ಯದಲ್ಲಿ ತೆಳುವಾಗಿರುತ್ತದೆ
 C. ಸತ್ಯ ಮತ್ತು ನೇರ ಪ್ರತಿಬಿಂಬವನ್ನು ಉಂಟುಮಾಡುತ್ತದೆ
 D. ಅಂಚುಗಳಲ್ಲಿ ತೆಳುವಾಗಿದ್ದು ಮಧ್ಯದಲ್ಲಿ ದಪ್ಪನಾಗಿರುತ್ತದೆ.
3. ಕಾಂತೀಯ ಬಲರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ. ಏಕೆ ?
4. ಓಮ್‌ನ ನಿಯಮವನ್ನು ನಿರೂಪಿಸಿ, ಒಂದು ವಾಹಕದ ರೋಧವು ಯಾವ ಅಂಶಗಳ ಮೇಲೆ ಅವಲಂಬಿತವಾಗಿದೆ ? ವಿದ್ಯುತ್ ಸಾಮರ್ಥ್ಯದ SI ಏಕಮಾನ ತಿಳಿಸಿ.
5. 1) ಸೊಲೆನಾಯ್ಡ್ ಎಂದರೇನು ? ವಿದ್ಯುತ್ ಪ್ರವಹಿಸುತ್ತಿರುವ ಸೊಲೆನಾಯ್ಡ್ ಸುತ್ತಲೂ ಉಂಟಾಗುವ ಕಾಂತೀಯ ಬಲರೇಖೆಗಳ ಗುಣಲಕ್ಷಣಗಳನ್ನು ಬರೆಯಿರಿ.
 2). ಗೃಹಬಳಕೆ ವಿದ್ಯನ್ಮಂಡಲದಲ್ಲಿ ಓವರ್ ಲೋಡ್ ತಪ್ಪಿಸಲು ಯಾವುದಾದರೂ 2 ಕ್ರಮಗಳನ್ನು ತಿಳಿಸಿ.
6. ಪೀನಮಸೂರದ $2F_1$ ನಲ್ಲಿ ವಸ್ತುವನ್ನಿರಿಸಿದಾಗ ಪ್ರತಿಬಿಂಬ ಉಂಟಾಗುವಿಕೆಯನ್ನು ತೋರಿಸುವ ರೇಖಾಚಿತ್ರವನ್ನು ಬರೆಯಿರಿ.
7. ಕಣ್ಣಿನ ಹೊಂದಾಣಿಕೆ ಸಾಮರ್ಥ್ಯಎಂದರೇನು ?ಸಾಮಾನ್ಯ ದೃಷ್ಟಿಯುಳ್ಳವರಿಗೆ ದೂರ ಬಿಂದು ಮತ್ತು ಸಮೀಪ ಬಿಂದುಗಳಾವುವು?

#### ಭಾಗ – B ( ರಸಾಯನ ವಿಜ್ಞಾನ )

1. ಇವುಗಳಲ್ಲಿ ಪರ್ಯಾಪ್ತ ಹೈಡ್ರೋಕಾರ್ಬನ್‌ಗೆ ಒಂದು ಉದಾಹರಣೆ.
 A. $C_2H_6$ B. $C_3H_4$ C. $C_2H_2$ D. $C_2H_4$
2. ಚಿಪ್ಸ್ ತಯಾರಕರು ಚಿಪ್ಸ್‌ನ ಪೊಟ್ಟಣದೊಳಗೆ ನೈಟ್ರೋಜನ್ ಅನಿಲವನ್ನು ಹಾಯಿಸುತ್ತಾರೆ ಏಕೆ?
3. ವಸ್ತುಗಳ ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ಸ್ವಭಾವಗಳಿಗೆ ಕಾರಣವಾದ ಅಯಾನುಗಳನ್ನು ಹೆಸರಿಸಿ.
4. ನೀರಿನ ವಿದ್ಯುತ್ ವಿಭಜನೆಯಲ್ಲಿ ಉಪಯೋಗಿಸುವ ಉಪಕರಣದ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ
5. ಈ ಕೆಳಗಿನ ಸಂಯುಕ್ತಗಳ ಅಣು ಸೂತ್ರಗಳನ್ನು ಬರೆದು ಪ್ರತಿಯೊಂದು ಉಪಯೋಗಗಳನ್ನು ತಿಳಿಸಿ.
 ಅ) ಬ್ಲೀಚಿಂಗ್ ಪುಡಿ ಆ) ಪ್ಲಾಸ್ಟರ್ ಆಫ್ ಪ್ಯಾರಿಸ್
6. ಸಾಬೂನ್‌ಗಳು ಸ್ವಚ್ಛಗೊಳಿಸುವ ಕ್ರಿಯೆಯನ್ನು ವಿವರಿಸಿ.
7. ಲೋಹದ ಮೇಲೆ ಹಬೆಯ ವರ್ತನೆಯ ತೋರಿಸುವ ಪ್ರಯೋಗದ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆಯಿರಿ.ಎಲ್ಲ ಭಾಗಗಳನ್ನು ಗುರುತಿಸಿ.

#### ಭಾಗ – C ( ಜೀವ ವಿಜ್ಞಾನ )

1.ಕೆಳಗೆ ಕೊಟ್ಟಿರುವ ಆಹಾರ ಸರಪಳಿಯಸರಿಯಾದ ಕ್ರಮ
 A. ಮಿಡತೆ → ಹುಲ್ಲು → ಕಪ್ಪೆ → ಹಾವು → ಹದ್ದು
 B. ಹುಲ್ಲು → ಮಿಡತೆ → ಹದ್ದು → ಹಾವು → ಕಪ್ಪೆ
 C. ಹುಲ್ಲು → ಮಿಡತೆ → ಕಪ್ಪೆ → ಹಾವು → ಹದ್ದು
 D. ಹದ್ದು → ಹಾವು → ಕಪ್ಪೆ → ಮಿಡತೆ → ಹುಲ್ಲು
2. ಎತ್ತರದ (TT) ಬಟಾಣಿ ಸಸ್ಯವನ್ನು ಕುಬ್ಜ (tt) ಬಟಾಣಿ ಸಸ್ಯದೊಂದಿಗೆ ಸಂಕರಣಗೊಳಿಸಿದಾಗ ಏಕತಳೀಕರಣದ F2 ಪೀಳಿಗೆಯಲ್ಲಿ ಉಂಟಾಗುವ ಸಸ್ಯಗಳ ವಿಧಗಳ ಅನುಪಾತ
 A.1:2 B. 1:3 C. 3:1 D. 2:1
3. ಮಾನವನ ಹೃದಯದ ನೀಳಛೇದ ನೋಟವನ್ನು ತೋರಿಸುವ ಚಿತ್ರವನ್ನು ಬರೆಯಿರಿ.
4. 1. ಶಲಾಕಾಗ್ರದ ಮೇಲೆ ಪರಾಗದ ಮೊಳೆಯುವಿಕೆಯನ್ನು ತೋರಿಸುವ ಚಿತ್ರ ಬರೆದು ಭಾಗಗಳನ್ನು ಗುರುತಿಸಿ
 2. ಸ್ತ್ರೀಯ ಗರ್ಭಾವಧಿಯಲ್ಲಿ ಜರಾಯುವಿನ ರಚನೆ ಮತ್ತು ಪ್ರಮುಖ ಪಾತ್ರವನ್ನು ವಿವರಿಸಿ
5. 1. "ಗೊತ್ತಾಗದೆ ಮುಳ್ಳಿನ ಮೇಲೆ ಕಾಲಿಟ್ಟಾಗ ನಮ್ಮ ಕಾಲನ್ನು ಹಿಂದಕ್ಕೆ ಎಳೆದುಕೊಳ್ಳುತ್ತೇವೆ"
 a. ಈ ಕ್ರಿಯೆಯಲ್ಲಿ ಜರಗುವ ಘಟನೆಗಳನ್ನು ಕ್ರಮಾನುಗತವಾಗಿ ನಿರೂಪಿಸಿ
 b. ಮಾನವನ ನರವ್ಯೂಹದ ಯಾವ ಭಾಗವು ಈ ಕ್ರಿಯೆಯನ್ನು ನಿಯಂತ್ರಿಸುತ್ತದೆ.
 2. ಈ ಕೆಳಗಿನ ಸಸ್ಯ ಹಾರ್ಮೋನ್‌ಗಳ ಕಾರ್ಯ ತಿಳಿಸಿ
 a. ಆಕ್ಸಿನ್ b. ಸೈಟೋಕೈನಿನ್

ವಿದ್ಯಾರ್ಥಿಗಳಿಗೆ ಸೂಚನೆ:
ಈ ಮೇಲಿನ ಪ್ರಶ್ನೆಪತ್ರಿಕೆ ಮಾದರಿ ಮಾತ್ರ. ಇದನ್ನು ಬಿಡಿಸುವುದರ ಮೂಲಕ ಪರೀಕ್ಷೆಗೆ ಸಿದ್ಧರಾಗಿ.

*"ಸಾಧನೆಗೆ ಅಸಾಧ್ಯವಾದದ್ದು ಯಾವುದೂ ಇಲ್ಲ, ದೃಢ ಸಂಕಲ್ಪದಿಂದ ಸಾಧಿಸು"*

-: BEST OF LUCK :-


www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

**ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ**

## ಆನಂದ ಬಾಣ





## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 23–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1619.93 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 11173 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 61.126 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.81 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 359 ಕ್ಯುಸೆಕ್ |
| ಸಾಮರ್ಥ್ಯ | 10.066 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

24–01–2025 – ಶುಕ್ರವಾರ

| | |
|---|---|
| ತಿಥಿ | : ದಶಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅನುರಾಧ |
| ಯೋಗ | : ವೃದ್ಧಿ |
| ಕರಣ | : ವಿಷ್ಟಿ |
| ಸೂರ್ಯೋದಯ | : 07:10:35 |
| ಸೂರ್ಯಾಸ್ತ | : 18:07:46 |
| ರಾಹು ಕಾಲ | : 11:17–12:39 |
| ಯಮಘಂಡ ಕಾಲ | : 15:23–16:46 |
| ಗುಳಿಕ ಕಾಲ | : 08:33–09:55 |

## ರಾಷ್ಟ್ರೀಯ ಲೋಕ ಅದಾಲತ್

ಮೂರನೆ ಪುಟದಿಂದ

ಈ ಲೋಕ ಅದಾಲತನಲ್ಲಿ ಸಾರ್ವಜನಿಕರು ತಮ್ಮ ಪ್ರಕರಣಗಳನ್ನು ರಾಜಿ ಸಂದಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ಇದರಿಂದ ಸಮಯ. ಹಣ ಮತ್ತು ಸಂಬಂಧಗಳು ಹಾಳಾಗದೆ ಸರಿಯಾಗಿ ಜೀವನ ನಡೆಸುವಂತಾಗುತ್ತದೆ. ಕಳೆದ ರಾಷ್ಟ್ರೀಯ ಲೋಕ ಅದಾಲತನಲ್ಲಿ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಇವರ ವಿಶೇಷ ಮುತುವರ್ಜಿಯಿಂದ 5340 ಪ್ರಕರಣಗಳನ್ನು ಜಿಲ್ಲೆಯಲ್ಲಿ ರಾಜಿ ಸಂದಾನದ ಮೂಲಕ ಇತ್ಯರ್ಥಪಡಿಸಲಾಗಿದೆ.

ಜಿಲ್ಲೆಯಾದ್ಯಂತ 32 ಸಾವಿರಕ್ಕಿಂತಲೂ ಹೆಚ್ಚಿನ ಕೇಸಗಳು ಪೆಂಡಿಂಗ್ ಇದ್ದು ಬರುವ ಈ ಲೋಕ ಅದಾಲತನಲ್ಲಿ ಕಳೆದ ಸಲಕ್ಕಿಂತಲೂ ಈ ಬಾರಿ 6 ರಿಂದ 7 ಸಾವಿರ ಪ್ರಕರಣಗಳನ್ನು ಇತ್ಯರ್ಥ ಪಡಿಸುವ ಗುರಿ ಹೊಂದಲಾಗಿದೆ. ಸುಳ್ಳು ಪ್ರಕರಣಗಳನ್ನು ಹೊರತುಪಡಿಸಿ ಬ್ಯಾಂಕ್ ಸಾಲ. ಪಾರ್ಟಿಷನ್ ಸೂಟ. ಪ್ರಿ ಲಿಟಿಗೇಶನ್ ಕೇಸ. ಕೌಟುಂಬಿಕ ಕಲಹ ಸೇರಿದಂತೆ ಇತರೆ ಹಲವಾರು ಪ್ರಕರಣಗಳನ್ನು ರಾಷ್ಟ್ರೀಯ ಲೋಕ ಅದಾಲತನಲ್ಲಿ ಇತ್ಯರ್ಥಪಡಿಸಲಾಗುತ್ತದೆ ಎಂದು ಹೇಳಿದರು.

ರಾಜಿ ಸಂದಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವುದರಿಂದ ಇಬ್ಬರ ನಡುವಿನ ಸಂಬಂಧ ಚೆನ್ನಾಗಿ ಇರುತ್ತದೆ ಇಲ್ಲವಾದರೆ ಅದು ಮುಂದೆ ಅವರ ಗ್ರಾಮದಲ್ಲಿಯ ಸಂಬಂದ ಕೂಡ ಹಳಸಿ ಅದು ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಇಂಥಹ ವಿಷಮ ಗಾಳಿ ಬೀಸುತ್ತದೆ ಆಂದರೆ ಕೆಟ್ಟ ವಾತಾವರಣ ನಿರ್ಮಾಣ ಆಗುತ್ತದೆ ಹಾಗೆ ಆಗಬಾರದು ಎಂಬ ಉದ್ದೇಶದಿಂದ ಈ ಲೋಕ ಅದಾಲತ ಕಾರ್ಯಕ್ರಮ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸಲಾಗುತ್ತದೆ. ಲೋಕ ಅದಾಲತನಲ್ಲಿ ಪ್ರಕರಣಗಳು ಬೇಗ ಇತ್ಯರ್ಥವಾಗುವುದರಿಂದ ಜನರು ಅನಾವಶ್ಯಕ ವಾಗಿ ಕೋರ್ಟ್ ಅಲೆಯುವದು ತಪ್ಪುತ್ತದೆ. ಅವರ ಖರ್ಚು ಉಳಿಯುತ್ತದೆ ಪರಸ್ಪರ ಸಂಬಂಧಗಳು ಚೆನ್ನಾಗಿ ಇರುತ್ತವೆ. ಸಾರ್ವಜನಿಕರ ಪ್ರಕರಣಗಳನ್ನು ಬೇಗ ಇತ್ಯರ್ಥ ಪಡಿಸಬೇಕು ಮತ್ತು ಅವರ ಅನುಕೂಲ ಕ್ಕಾಗಿಯೆ ಇದನ್ನು ಮಾಡಲಾಗಿದ್ದು ಬಹಳಷ್ಟು ಜನರಿಗೆ ಇದರ ಮಾಹಿತಿ ಗೊತ್ತಿಲ್ಲ ಎಂದರು.

ಈ ಪತ್ರಿಕಾಗೋಷ್ಠಿಯಲ್ಲಿ ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸುರೇಶ ಜಿ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಛೇರಿಯ ಪ್ರಥಮ ದರ್ಜೆ ಸಹಾಯಕ ಎಂ.ಡಿ ಹನೀಫ್. ಶಿಲ್ಪಾ. ಎಂ.ಡಿ. ಇಸ್ಮಾಯಿಲ್ ಹಾಗೂ ಮಾಧ್ಯಮ ಪ್ರತಿನಿಧಿಗಳು ಇತರರು ಉಪಸ್ಥಿತರಿದ್ದರು.

### ಬಳ್ಳಾರಿ ಮಹಾನಗರ ಪಾಲಿಕೆಯಿಂದ

# ನಿರಾಶ್ರಿತರಿಗೆ ಆಶ್ರಯ ವ್ಯವಸ್ಥೆ

### ಪಾಲಿಕೆಯ ಆಯುಕ್ತರು ಹೇಳಿಕೆ । ನಗರದ ವ್ಯಾಪ್ತಿಯಲ್ಲಿ ವಿವಿಧೆಡೆ 4 ಆಶ್ರಯ ಕೇಂದ್ರಗಳು




■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ಮಹಾನಗರ ಪಾಲಿಕೆಯ ಡೇ–ನಲ್ಮ್ ಯೋಜನೆಯ ವಸತಿ ರಹಿತರಿಗೆ ಆಶ್ರಯ ಉಪಘಟಕದಡಿ ಬಳ್ಳಾರಿ ನಗರದ ವ್ಯಾಪ್ತಿಯಲ್ಲಿ ವಿವಿಧೆಡೆ 4 ವಸತಿ ರಹಿತ ನಿರಾಶ್ರಿತರಿಗೆ ಆಶ್ರಯ ಕೇಂದ್ರಗಳನ್ನು ಆರಂಭಿಸಲಾಗಿದೆ ಎಂದು ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

ಆಶ್ರಯ ಕೇಂದ್ರಗಳಲ್ಲಿ ಪುರುಷ ಹಾಗೂ ಮಹಿಳಾ ನಿರಾಶ್ರಿತರಿಗೆ ಪ್ರತ್ಯೇಕ ಕೊಠಡಿ, ನಿರಾಶ್ರಿತರಿಗೆ ಆಶ್ರಯ ಸೌಲಭ್ಯ ಹಾಗೂ ಮೂಲಭೂತ ಸೌಕರ್ಯಗಳಾದ ಕಾಟ್, ತಲೆದಿಂಬು, ಪ್ಲೇಟ್, ಕುಡಿಯುವ ನೀರು, ಮನೋರಂಜನೆಗಾಗಿ ಟಿವಿ, ಮಹಿಳೆಯರಿಗೆ ಹಾಗೂ ಪುರುಷರಿಗೆ ಪ್ರತ್ಯೇಕ ಶೌಚಾಲಯ ಸೌಲಭ್ಯ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಆಶ್ರಯ ಕೇಂದ್ರಗಳನ್ನು ನಿರ್ವಹಣೆ ಮಾಡುತ್ತಿರುವ ಸಂಸ್ಥೆಯ ಸಿಬ್ಬಂದಿಗಳು ಪ್ರತಿ 15 ದಿನಗಳಿಗೊಮ್ಮೆ ಬಸ್‌ಸ್ಟ್ಯಾಂಡ್, ರೈಲ್ವೆ ನಿಲ್ದಾಣ ಹಾಗೂ ರಸ್ತೆ ಬದಿಗಳಲ್ಲಿ ರ್‍ಯಾಪಿಡ್ ಸರ್ವೇ ಕೈಗೊಂಡು ನಿರಾಶ್ರಿತರನ್ನು ಗುರುತಿಸಿ ಆಶ್ರಯ ಕೇಂದ್ರಕ್ಕೆ ಕರೆದುಕೊಂಡು ಹೋಗಲು ಕ್ರಮ ವಹಿಸುತ್ತಾರೆ.

ಪ್ರತಿ ತಿಂಗಳು ಕೇಂದ್ರದಲ್ಲಿ ನಿರಾಶ್ರಿತರಿಗೆ ಸರ್ಕಾರಿ ವೈದ್ಯರ ಮೂಲಕ ಆರೋಗ್ಯ ತಪಾಸಣೆ, ಕೇಂದ್ರದಲ್ಲಿ ನಿರಾಶ್ರಿತರಿಗೆ ಅವಶ್ಯಕತೆ ಇದ್ದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಾದ ಆಧಾರ್ ಕಾರ್ಡ್, ರೇಷನ್ ಕಾರ್ಡ್, ವೃದ್ದರಿಗೆ, ಅಂಗವಿಕಲರಿಗೆ ಹಾಗೂ ವಿಧವೆಯರಿಗೆ ಮಾಸಾಶನ ಸೌಲಭ್ಯ ಹಾಗೂ ಬ್ಯಾಂಕ್‌ಗಳ ಮೂಲಕ ವಿಮೆ ಸೌಲಭ್ಯ ಸಹ ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ವಸತಿ ರಹಿತ ಆಶ್ರಯ ಕೇಂದ್ರಗಳಿಗೆ ಕಳೆದ 2024ರ ಡಿಸೆಂಬರ್ ಮಾಹೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ ಕಾರ್ಯಾಲಯದ ಯೋಜನಾ ನಿರ್ದೇಶಕ ರಾಘವೇಂದ್ರ ಗುರು, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಾಣೇಶ್, ಜಿಲ್ಲಾ ಅಭಿಯಾನ ವ್ಯವಸ್ಥಾಪಕರಾದ ಸೌಮ್ಯ. ಎಸ್., ಬಳ್ಳಾರಿ ಮಹಾನಗರ ಪಾಲಿಕೆಯ ಸಮುದಾಯ ಸಂಘಟಕರಾದ ಸಿ.ಎನ್.ಪುಷ್ಪಲತಾ ಹಾಗೂ ಮಲ್ಟಿ ಟಾಸ್ಕಿಂಗ್ ಅಫೀಷಿಯಲ್ಸ್ ಚನ್ನಬಸವನಗೌಡ ಅವರು ಭೇಟಿ ನೀಡಿ ಕೇಂದ್ರಗಳ ನಿರ್ವಹಣೆ ಪರಿಶೀಲಿಸಿ ಕೇಂದ್ರಗಳ ನಿರ್ವಹಣಾ ಸಂಸ್ಥೆಯ ಮ್ಯಾನೇಜರ್ ಹಾಗೂ ಕೇರ್‌ಟೇಕರ್ಸ್‌ಗಳಿಗೆ ನಿರ್ದೇಶನ ನೀಡಿದ್ದಾರೆ.

ಯಾರಾದರೂ ನಿರಾಶ್ರಿತರು ರಸ್ತೆಯ ಬದಿ, ಬಸ್‌ಸ್ಟ್ಯಾಂಡ್, ರೈಲ್ವೇ ನಿಲ್ದಾಣಗಳಲ್ಲಿ ಮಲಗಿರುವುದು ಕಂಡುಬಂದಲ್ಲಿ ಸಾರ್ವಜನಿಕರು ಆಶ್ರಯ ಕೇಂದ್ರಗಳ ವ್ಯವಸ್ಥಾಪಕರಿಗೆ ಸಂಪರ್ಕಿಸಿ ನಿರಾಶ್ರಿತರಿಗೆ ಅವಶ್ಯಕವಿರುವ ಆಶ್ರಯ ಸೌಲಭ್ಯದ ಬಗ್ಗೆ ಮಾಹಿತಿ ನೀಡಬೇಕು ಎಂದು ಬಳ್ಳಾರಿ ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

#### ಆಶ್ರಯ ಕೇಂದ್ರಗಳ ವಿವರ

ನಗರದ ಕೋಟೆ ಪ್ರದೇಶದ 34 ನೇ ವಾರ್ಡ್‌ನ ತಾಪಂ ಹತ್ತಿರದ ವಸತಿ ರಹಿತ ಆಶ್ರಯ ಕೇಂದ್ರದ ವ್ಯವಸ್ಥಾಪಕ ಧನುಂಜಯ (ಮೊ.9916221171).

ಅನಂತಪುರ ರಸ್ತೆಯ ಜಿಲ್ಲಾ ಆಸ್ಪತ್ರೆ ಕಟ್ಟಡದಲ್ಲಿನ ವಸತಿ ರಹಿತ ಆಶ್ರಯ ಕೇಂದ್ರದ ವ್ಯವಸ್ಥಾಪಕ ನವೀನ್ (ಮೊ.7975615467).

ವಿದ್ಯಾನಗರದ ವಿಮ್ಸ್ ಆಸ್ಪತ್ರೆ ಆವರಣ ಕಟ್ಟಡದ ವಸತಿ ರಹಿತ ಆಶ್ರಯ ಕೇಂದ್ರದ ವ್ಯವಸ್ಥಾಪಕ ಪ್ರವೀಣ್ ಕುಮಾರ್ (ಮೊ.9113526634).

ಎಪಿಎಂಸಿ ಹತ್ತಿರದ ಬಂಡಿಮೋಟ್ ಪ್ರದೇಶದ ವಸತಿ ರಹಿತ ಆಶ್ರಯ ಕೇಂದ್ರದ ವ್ಯವಸ್ಥಾಪಕ ಸುರೇಶ್ (ಮೊ.9535717004), ಇವರನ್ನು ಸಂಪರ್ಕಿಸಬಹುದು.

# ಪ್ರವಾಸೋದ್ಯಮ ಇಲಾಖೆಯಿಂದ ಒಂದು ತಿಂಗಳ ಉದ್ಯಮಶೀಲತಾ ತರಬೇತಿ ಕಾರ್ಯಗಾರ

### ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರಿಗೆ ಉತ್ತೇಜನ

### 10ನೇ ತರಗತಿ ಉತ್ತೀರ್ಣ । ಜ.23 ರಿಂದ ಜ.31ರೋಳಗೆ ಅರ್ಜಿ ಸಲ್ಲಿಸಿ

■ ಹಂಪಿ ಟೈಮ್ಸ್ ಹೊಸಪೇಟೆ

ಪ್ರವಾಸೋದ್ಯಮ ಇಲಾಖೆಯಿಂದ 2024–25 ನೇ ಸಾಲಿನಲ್ಲಿ ಎಸ್‌ಸಿಪಿ, ಟಿ.ಎಸ್.ಪಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಒಂದು ತಿಂಗಳ ಉದ್ಯಮಶೀಲತೆ (Enterprenuership) ತರಬೇತಿಯನ್ನು ನೀಡುವುದು ಹಾಗೂ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟಿನ್ ನಡೆಸಲು ಸಹಾಯಧನ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಪ್ರಭುಲಿಂಗಪ್ಪ ತಳಕೇರಿ ತಿಳಿಸಿದ್ದಾರೆ.

ಯೋಜನೆಯಲ್ಲಿ ಪರಿಶಿಷ್ಟ ಜಾತಿ –6, ಪರಿಶಿಷ್ಟ ಪಂಗಡ–4 ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗಿದ್ದು, ಕನಿಷ್ಟ 10 ನೇ ತರಗತಿ ಉತ್ತೀರ್ಣವಾಗಿರಬೇಕು. ವಯೋಮಿತಿ 20 ರಿಂದ 45 ವರ್ಷದೊಳಗಿರಬೇಕು. ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದಿರಬೇಕು. ನಗರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.2.00 ಲಕ್ಷ ಮೀರಬಾರದು. ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.1.50 ಲಕ್ಷ ಮೀರಬಾರದು. ಅರ್ಜಿದಾರರು ವಿಜಯನಗರ ಜಿಲ್ಲೆಯ ನಿವಾಸಿಯಾಗಿರಬೇಕು. ಅರ್ಜಿದಾರನು ಯಾವುದೇ ಸರ್ಕಾರಿ ಇಲಾಖೆ ಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು. ಅಭ್ಯರ್ಥಿಗಳು ನಿಗದಿಪ ಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಲೋಟಸ್ ಮಹಲ್ ಹತ್ತಿರ, ಕಮಲಾಪುರ ಕಚೇರಿಯಲ್ಲಿ ಜ.23 ರಿಂದ ಜ.31 ರೊಳಗೆ ಅರ್ಜಿಗಳನ್ನು ಪಡೆದುಕೊಳ್ಳುವುದು. ಇದೇ ಕಛೇರಿಯಲ್ಲಿ ಅರ್ಜಿಗಳನ್ನು ಸಲ್ಲಿಸುವುದು. ದೂ.08394–295640 ಸಂಖ್ಯೆಗೆ ಕಚೇರಿ ಸಮಯದಲ್ಲಿ ಸಂಪರ್ಕಿಸಲು ತಿಳಿಸಲಾಗಿದೆ. ಯೋಜನೆಯ ಘಟಕ ವೆಚ್ಚ : ಮೊಬೈಲ್ ಕ್ಯಾಂಟೀನ್ ವಾಹನ ಖರೀದಿಸಲು ಇಲಾಖೆಯ ಸಹಾಯಧನ ಘಟಕ ವೆಚ್ಚದಲ್ಲಿ ಶೇ.70%ರಷ್ಟು ಗರಿಷ್ಠ ರೂ.5.00 ಲಕ್ಷಗಳು ಮಾತ್ರ. ಫಲಾನುಭವಿಯ ವಂತಿಗೆ ವಾಹನದ ಒಟ್ಟು ವೆಚ್ಚದ ಶೇ.5 ರಷ್ಟು, ಹಣಕಾಸು ಸಂಸ್ಥೆಗಳು, ಬ್ಯಾಂಕ್ ಸಾಲ ವಾಹನದ ಒಟ್ಟು ವೆಚ್ಚದಲ್ಲಿ ಉಳಿದ ಮೊತ್ತವಾಗಿರುತ್ತದೆ ಎಂದು ತಿಳಿಸಿದ್ದಾರೆ.

# ಎರಡು ವಾರಕ್ಕಿಂತ ಹೆಚ್ಚು ಕಡಿಮೆಯಾಗದ ಕೆಮ್ಮು ಕ್ಷಯವಾಗಿರಬಹುದು:ಒಮ್ಮೆ ಪರೀಕ್ಷಿಸಿ



■ ಹಂಪಿ ಟೈಮ್ಸ್ ಬಳ್ಳಾರಿ

ಕ್ಷಯರೋಗ ಎಂಬುದು ಇಂದಿಗೂ ಸಮುದಾಯದ ಲ್ಲಿರುವ ಖಾಯಿಲೆಯಾಗಿದ್ದು, ಎರಡು ವಾರಗಳಿ ಗಿಂತಲೂ ಹೆಚ್ಚು ದಿನ ಕಡಿಮೆಯಾಗದ ಕೆಮ್ಮು ಇದ್ದಲ್ಲಿ ಬಹುಶಃ ಕ್ಷಯವಿರಬಹುದು. ಒಮ್ಮೆ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆಯ ರಾಜ್ಯ ಕ್ಷಯರೋಗ ಸಲಹೆಗಾರರಾದ ಡಾ.ಆಸ್ಮಾ ವರದಾ ಅವರು ಸಾರ್ವಜನಿಕರಿಗೆ ತಿಳಿಸಿದರು.

ಬುಧವಾರದಂದು, ಕ್ಷಯರೋಗ ಪತ್ತೆ ಮತ್ತು ಚಿಕಿತ್ಸೆಯ 100 ದಿನಗಳ ಅಭಿಯಾನದಡಿ ನಗರದ ಕೌಲ್ ಬಜಾರ್ ವ್ಯಾಪ್ತಿಯ ಬ್ರೂಸ್ ಪೇಟೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಜಿಲ್ಲಾಡಳಿತ ಒದಗಿಸಿರುವ ಆಧುನಿಕ ಸ್ಥಳದಲ್ಲಿಯೇ ರೋಗದ ಪತ್ತೆ ಹಚ್ಚುವಿಕೆಯ ಹ್ಯಾಂಡ್‌ಹೋಲ್ಡ್ ಎಕ್ಸ್–ರೇ ಮೆಷಿನ್ ಮೂಲಕ ರೋಗ ನಿರ್ಧರಿಸುವ ಕಾರ್ಯ ಪರಿಶೀಲಿಸಿ ಅವರು ಮಾತನಾಡಿದರು.

ಸಾವಿರಾರು ವರ್ಷಗಳಿಂದ ಸಮುದಾಯದಲ್ಲಿ ಬೇರುರಿರುವ ಕ್ಷಯರೋಗ (ಟಿಬಿ) ಯನ್ನು ಕೊನೆಗಾಣಿಸಲು ಉಚಿತ ಚಿಕಿತ್ಸೆ ನೀಡುವ ಜೊತೆಗೆ ಮೂಲಕ ರೋಗಿಗಳಿಗೆ ಆತ್ಮಸ್ಥೈರ್ಯ ತುಂಬಲಾ ಗುತ್ತಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದಮಾರ್ಗದರ್ಶನದಡಿವಯೋವೃದ್ಧರು, ಕಾರ್ಮಿಕರು, ರಕ್ತದೊತ್ತಡ, ಸಕ್ಕರೆ ಕಾಯಿಲೆಯಿಂದ ಬಳಲುವವರು ಮಾನಸಿಕ ಅಸ್ವಸ್ಥತೆಯುಳ್ಳವರಿಗೆ ಮೊದಲ ಪ್ರಾಶಸ್ತ್ಯ ನೀಡಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ ಅವರು ಮಾತನಾಡಿ ಕಫ ಪರೀಕ್ಷೆ, ಟ್ರ್ಯೂನಾಟ್, ಸಿಬಿನಾಟ್ ಮೂಲಕ ಹಾಗೂ ಹ್ಯಾಂಡ್‌ಹೋಲ್ಡ್ ಎಕ್ಸ್ –ರೇ ಯಂತ್ರದಿಂದ ನಿರಂತರ ಪರೀಕ್ಷೆ ಮಾಡಲಾಗುತ್ತಿದ್ದು, ಈಗಾಗಲೇ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಕುಟುಂಬದ ಸದಸ್ಯರು ಹಾಗೂ ಯಾರಿಗಾದರೂ ಉಸಿರಾಟದಲ್ಲಿ ತೊಂದರೆ, ಸಂಜೆ ವೇಳೆ ಜ್ವರ, ರಾತ್ರಿ ವೇಳೆ ಮೈ ಬೆವರುವುದು, ಕಫದಲ್ಲಿ ರಕ್ತ ಬೀಳುವುದು, ಎದೆ ನೋವು, ಕಾರಣವಿಲ್ಲದೆ ಹಸಿವಾಗದಿರುವುದು, ತೂಕ ಇಳಿಕೆಯಾಗುತ್ತಿದ್ದಲ್ಲಿ ಒಮ್ಮೆ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ವಿನಂತಿಸಿದರು.

ಈ ಸಂದರ್ಭದಲ್ಲಿ ಡಾ.ಸುರೇಖಾ, ಕ್ಷಯರೋಗ ವಿಭಾಗದ ಕ್ಷಕಿರಣ ಅಧಿಕಾರಿ ಶೇಷಾವಲಿ, ಎಸ್‌ಟಿಎಸ್ ಓಬಳರೆಡ್ಡಿ, ಟಿಬಿಹೆಚ್‌ವಿ ಪ್ರದೀಪ್, ಔಷಧಾಧಿಕಾರಿ ಶ್ರೀನಾಥ್ ಪಾಟೀಲ್, ಪಿಹೆಚ್‌ಸಿಓ ತುಳಸಿ ಹೆಗಡೆ, ಶುಶ್ರೂಷಣಾಧಿಕಾರಿ ಆಶಾ ಸೇರಿದಂತೆ ಸಾರ್ವಜನಿಕರು ಇತರರು ಇದ್ದರು.

## ಕ.ರಾ.ಸ.ನೌ. ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಾಕ್ಷರಿಗೆ ಅದ್ದೂರಿ ಸ್ವಾಗತ



■ ಹಂಪಿ ಟೈಮ್ಸ್ ಕೊಟ್ಟೂರು

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರು ಸಿ.ಎಸ್ ಷಡಾಕ್ಷರಿ ಹಾಗೂ ರಾಜ್ಯ ಪಾದಾಧಿಕಾರಿಗಳನ್ನು ಕೊಟ್ಟೂರು ತಾಲೂಕು ಘಟಕವು ಗುರುವಾರ ಪಟ್ಟಣದಲ್ಲಿ ವಿವಿಧ ವಾಧ್ಯ ಮೇಳಗಳಗಳೊಂದಿಗೆ ವೀಜೃಂಭಣೆಯಿಂದ ಸ್ವಾಗತಿಸಿ ಸಂಭ್ರಮಿಸಿದರು,

ಸ್ವಾಗತ ಮೆರವಣಿಗೆಯು ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಿಂದ ಪ್ರಾರಂಭಗೊಂಡು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ನಂದಿ ಧ್ವಜ ಕುಣಿತ, ಸಮಳ, ಮೇಳ ವಾದ್ಯಗಳ ಸಂಭ್ರಮದೊಂದಿಗೆ ಅದ್ದೂರಿ ಸಾಗುತ್ತ ಜನರ ಗಮನಸೆಳೆಯಿತು.ಮೆರವಣಿಗೆಯಲ್ಲಿ ತಾಲೂಕು ಘಟಕದ ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರು, ನೌಕರರು ಪಾಲ್ಗೊಂಡಿದ್ದರು.

## ಜ.26 ರಂದು ಜಿಲ್ಲಾಡಳಿತದಿಂದ 76ನೇ ಗಣರಾಜ್ಯೋತ್ಸವ ದಿನಾಚರಣೆ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತದಿಂದ 76ನೇ ಗಣರಾಜ್ಯೋತ್ಸವ ದಿನಾಚರಣೆಯ ಕಾರ್ಯಕ್ರಮವನ್ನು ಜ.26 ರಂದು ಬೆಳಿಗ್ಗೆ 09 ಗಂಟೆಗೆ ಬಿಮ್ಸ್ ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಂ ಖಾನ್ ಅವರು ಬೆಳಿಗ್ಗೆ 09 ಗಂಟೆಗೆ ಧ್ವಜಾರೋಹಣ ನೆರವೇರಿಸುವರು. ಇದಕ್ಕೂ ಮುನ್ನ ಸಚಿವರು, ಅಂದು ಬೆಳಿಗ್ಗೆ 08.15 ಕ್ಕೆ ಡಾ.ರಾಜ್ ಕುಮಾರ್ ಉದ್ಯಾನವನದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಗೌರವ ಸಮರ್ಪಣೆ ಮಾಡುವರು. ಬಳಿಕ ಬೆಳಿಗ್ಗೆ 09.05 ಕ್ಕೆ ಪಥ ಸಂಚಲನ ವೀಕ್ಷಣೆ ಮಾಡಿ ಗೌರವ ವಂದನೆ ಸ್ವೀಕಾರ ಮಾಡುವರು. ನಂತರ ಗಣರಾಜ್ಯೋತ್ಸವದ ಸಂದೇಶ ನೀಡಲಿದ್ದಾರೆ.

## ಪೂರ್ವಭಾವಿ ಸಭೆಯಲ್ಲಿ ನಿರ್ಧಾರ ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆ : ಸಹಾಯಕ ಆಯುಕ್ತ ಪಿ.ಪ್ರಮೋದ್




■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾ ಕೇಂದ್ರದಲ್ಲಿ ಫೆ.01 ರಂದು ಮಡಿವಾಳ ಮಾಚಿದೇವ ಜಯಂತಿ, ಫೆ.05 ರಂದು ಸವಿತಾ ಮಹರ್ಷಿ ಜಯಂತಿ ಹಾಗೂ ಫೆ.10 ರಂದು ಕಾಯಕ ಶರಣರ ಜಯಂತಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಸಹಾಯಕ ಆಯುಕ್ತ ಪಿ.ಪ್ರಮೋದ್ ಅವರು ತಿಳಿಸಿದರು.

ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ವಿವಿಧ ಮಹನೀಯರ ಜಯಂತಿ ಆಚರಣೆ ಕುರಿತು ಗುರುವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಹನೀಯರ ಜಯಂತಿಯನ್ನು ಶಿಷ್ಠಾಚಾರದನ್ವಯ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಿದ್ದು, ವಿವಿಧ ಇಲಾಖೆಗಳಿಗೆ ವಹಿಸಿದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದರು.

ವಿವಿಧ ಮಹನೀಯರ ಜಯಂತಿ ದಿನಗಳಂದು ನಗರದ ಡಾ.ರಾಜ್ ಕುಮಾರ್ ರಸ್ತೆಯ ಸರ್ಕಾರಿ (ಮಾಪು) ಪದವಿ ಪೂರ್ವ ಕಾಲೇಜ್ ಮೈದಾನದಿಂದ ಗಡಿಗಿ ಚೆನ್ನಪ್ಪ ವೃತ್ತ, ಬೆಂಗಳೂರು ರಸ್ತೆ, ಬ್ರೂಸ್ ಪೇಟೆ ಪೊಲೀಸ್ ಠಾಣೆ ಮುಂಭಾಗ, ತೇರುಬೀದಿ ರಸ್ತೆ, ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ಸಭಾಂಗಣದವರೆಗೆ ನಡೆಯಲಿದೆ. ಬಳಿಕ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜಿಸಬೇಕು ಎಂದು ತಿಳಿಸಿದರು.ಮೆರವಣಿಗೆ ಮತ್ತು ವೇದಿಕೆ ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತೆ ಕೈಗೊಳ್ಳಬೇಕು ಎಂದು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ಮಾತನಾಡಿ, ಮಹನೀಯರ ಜಯಂತಿ ಮೆರವಣಿಗೆಗೆ ವಿವಿಧ ಸಾಂಸ್ಕೃತಿಕ ಕಲಾತಂಡಗಳನ್ನು ಕರೆಸಲಾಗುವುದು. ಆಮಂತ್ರಣ ಪತ್ರಿಕೆ ಮುದ್ರಿಸಿ ಗಣ್ಯರನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು. ವೇದಿಕೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ, ವಚನ ಗಾಯನ, ಸುಗಮ ಸಂಗೀತ ಆಯೋಜಿಸಲಾಗುವುದು. ಕಾರ್ಯಕ್ರಮದಲ್ಲಿ ಎಲ್ಲಾ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು.

ಸಭೆಯಲ್ಲಿ ಸಮಾಜದ ಮುಖಂಡರುಗಳು, ಸಮಾಜದಲ್ಲಿ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಹಾಗೂ ವಿಶೇಷ ಸಾಧನೆಗೈದವರನ್ನು ಸನ್ಮಾನಿಸಬೇಕು ಎಂದು ಪ್ರಸ್ತಾಪಿಸಿದರು. ಇದೇ ಸಂದರ್ಭದಲ್ಲಿ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜಿಸಲು ತಮ್ಮ ಸಲಹೆ–ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆ, ತೋಟಗಾರಿಕೆ, ಪಾಲಿಕೆ ಹಾಗೂ ಪೊಲೀಸ್ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮುದಾಯದ ಮುಖಂಡರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.